UNIVERSAL
LIBRARY
OU_200862
UNIVERSAL
LIBRARY

**OSMANIA UNIVERSITY LIBRARY**

Call No. K81·6 P22M Accession No. K5536

Author [illegible]

Title [illegible] 1954

This book should be returned on or before the date last marked below.

ಮೊದಲನೆಯ ಮುದ್ರಣ ೧೯೪೪
ಎರಡನೆಯ ಮುದ್ರಣ ೧೯೫೪

ಬೆಲೆ : ಒಂದು ರೂಪಾಯಿ

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು :
**ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.**
ಕನ್ನಡ ಅಧ್ಯಾಪಕರು ಶಾರದಾವಿಲಾಸ ಕಾಲೇಜು ಮೈಸೂರು

ಮುದ್ರಕರು :
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,
ಮೈಸೂರು

# ಮುನ್ನುಡಿ

ಇದು ಭಾರತ ವರ್ಷದ ಕವಿಸಾರ್ವಭೌಮನೆಂದು ಕೀರ್ತಿತನಾಗಿರುವ ಕಾಳಿದಾಸನ ‘ಮೇಘದೂತ’ ಕಾವ್ಯದ ಭಾಷಾಂತರ. ಬ್ರಹ್ಮಶ್ರೀ ಪಂಡಿತ ರತ್ನಂ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರ ‘ಕನ್ನಡ ಮೇಘಸಂದೇಶ’ ವನ್ನೂ ಶ್ರೀಮಾನ್ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ‘ಕನ್ನಡ ಮೇಘದೂತ’ ವನ್ನೂ ಓದಿ ಸಂತೋಷಪಟ್ಟಿರುವ ನಮ್ಮ ಜನ ಈ ‘ಮೇಘದೂತ’ವನ್ನೂ ಓದಿ ಸಂತೋಷಿಸುವರೆಂದು ನಂಬಿದ್ದೇನೆ.

ಕಾಳಿದಾಸನ ಕೃತಿರತ್ನಗಳ ಭಾಷಾಂತರಗಳೂ ಅವುಗಳನ್ನು ಕುರಿತ ವಿಮರ್ಶೆಗಳೂ ಎಷ್ಟೆಷ್ಟು ಹೆಚ್ಚಾಗಿ ನಮ್ಮ ಭಾಷೆಯಲ್ಲಿ ಪ್ರಕಟವಾಗುತ್ತವೆಯೋ ಅಷ್ಟಷ್ಟೂ ನಮ್ಮ ನಾಡೂ ನುಡಿಯೂ ಪ್ರವರ್ಧಮಾನಕ್ಕೆ ಬರುವುದು ಎಂದು ನಾನು ಭಾವಿಸಿದ್ದೇನೆ. ಅಲ್ಲದೆ ಕಾಳಿದಾಸನ ಎಲ್ಲ ಕೃತಿಗಳೂ ಹತ್ತು ರೀತಿಯಲ್ಲಿ ಹತ್ತು ಜನರಿಂದ ಪರಿವರ್ತಿತವಾಗಿ ಕನ್ನಡಕ್ಕೆ ಬರುವುದಾದರೆ, ಆ ಕವಿಕುಲ ಗುರುವಿನ ಕಲಾಕೃತಿಗಳ ರಸಗ್ರಹಣದಿಂದಾಗುವ ಆನಂದವೂ ಚಿತ್ತಸಂಸ್ಕಾರವೂ ಕನ್ನಡಿಗರಿಗೆ ಕನ್ನಡದ ಮೂಲಕವಾಗಿಯೇ ದೊರೆಯುವುದಾದರೆ ಆ ಭಾಗ್ಯ ಬಹಳ ದೊಡ್ಡದು ಎಂದು ನಮ್ಮವರು ಪರಿಗಣಿಸುವರೆಂದು ನಾನು ಆಶಿಸಿದ್ದೇನೆ.

ಈ ಕೃತಿಯ ಎರಡನೆಯ ಮುದ್ರಣವನ್ನು ತಮ್ಮ ಮಾಲಿಕೆಯಲ್ಲಿ ಪ್ರಕಾಶಪಡಿಸಿ ಮತ್ತೊಮ್ಮೆ ಕನ್ನಡಿಗರಿಗೆ ಈ ನನ್ನ ಅನುವಾದ ಒದಗುವಂತೆ ಮಾಡಿದ ನನ್ನ ಪ್ರಿಯಮಿತ್ರರಾದ ಶ್ರೀ ಎಚ್. ಎಂ. ಶಂಕರನಾರಾಯಣ ರಾವ್ ಎಂ. ಎ. ಅವರಿಗೆ ತುಂಬಾ ಋಣಿಯಾಗಿದ್ದೇನೆ.

೪–೪–೫೪
ಮೈಸೂರು

**ಎಸ್. ವಿ. ಪರಮೇಶ್ವರಭಟ್ಟ**

# ಪ್ರಕಾಶಕರ ನುಡಿ

ಹತ್ತು ವರ್ಷಗಳ ಹಿಂದೆ ಈ ಗ್ರಂಥ ಅಚ್ಚಾಗಿತ್ತು. ಇದರ ಪ್ರತಿಗಳನ್ನು ಬಯಸಿ ವಾಚಕರಿಂದ ನಮಗೆ ಪತ್ರಗಳು ಬರುತ್ತಲೇ ಇದ್ದವು. ವಾಚಕರ ಕೋರಿಕೆಯನ್ನು ಮನ್ನಿಸಿ ಈ ಗ್ರಂಥವನ್ನು ಮತ್ತೆ ಮುದ್ರಿಸಿದೆ. ಈ ಗ್ರಂಥವನ್ನು ನಮ್ಮ ಮಾಲಿಯಲ್ಲಿ ಸೇರಿಸಿಕೊಳ್ಳಲು ಅನುಮತಿಕೊಟ್ಟ ನನ್ನ ಪ್ರಿಯಮಿತ್ರರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರಿಗೂ ಅತ್ಯಲ್ಪ ಕಾಲದಲ್ಲಿ ಇದನ್ನು ಅಚ್ಚಿಟ್ಟುಕೊಟ್ಟ ಪ್ರಿಯಮಿತ್ರ ಶ್ರೀ ಜಿ. ಎಚ್. ರಾಮರಾಯರಿಗೂ ನಾನು ತುಂಬ ಋಣಿ.

ಶಾರದಾಮಂದಿರ
ಮೈಸೂರು ೪–೪–೫೪

**ಎಚ್.ಎಂ. ಶಂಕರನಾರಾಯಣರಾವ್**
ಸಂಪಾದಕ

## ಚಿ. ಸೌ. ರಾಜಲಕ್ಷ್ಮಿಗೆ

ಮೇಘದೂತವನಿದನು ಮುಗಿಸಿ ತಂದಿಹೆನಿಂದು
ನನ್ನ ನಚ್ಚಿನ ನಲ್ಲೆ ನಿನಗೆ ಮುಡಿಸೆಂದು
ಸಂತಸದೊಳಿದ ಕೊಂಡು ಕೃತಕೃತ್ಯಳೆಂದೆನಿಸಿ
ಅರಳಿಸೆನ್ನೆದೆ ಹೂವನಿಂತೆ ಮನವೊಲಿಸಿ.

# ಪೂರ್ವ ಮೇಘ

೧

ಆವನೊರುವಂ ಯಕ್ಷನವಧಾನವಿರದಂದು
ಸ್ವಾಧಿಕಾರವ ಮರೆದು ಮಹಿಮೆಯಳಿದು
ತನ್ನ ಕಾಂತೆಯನಗಲಿ ವಿರಹಭಾರದಿ ಬಳಲಿ
ಭರ್ತೃವಿನ ಶಾಪದಿಂ ವರುಷಕಾಲ
ವಾಸಕ್ಕೈದಂ ಬಂದು ಜನಕನಂದನೆ ಮಿಂದ
ಪುಣ್ಯತೀರ್ಥಗಳಿರುವ ರಾಮಗಿರಿಯ
ನಿಬಿಡವೆನಿಸೆ ನೆಳಲೀವ ತರುಗಳಾಸರೆಗಳಲಿ
ಉಚಿತವಾದಾಶ್ರಮಂಗಳಲಿ ನೆಲಸಿ.

೨

ಅಬಲೆಯನು ತಾನಗಲಿ ಕನಕವಲಯವು ಕಳಚಿ
ಬರಿದಾದ ಮುಂಗೈಯೊಳಾ ಕಾಮಿಯು
ಅದುವೆ ಗಿರಿಯೊಳು ನೆಲಸಿ ಕೆಲವು ತಿಂಗಳು ಕಳೆದು
ಆಷಾಢ ಮಾಸದಲಿ ಮೊದಲ ದಿವಸ
ದಂತದಲಿ ದರೆಯನಗೆದೆರಚುತಿರುವಾಟದಲಿ
ತೊಡಗಿರುವ ಆನೆಯೊಲು ಕಣ್ಗೆಸೆಯುವ
ಸಾನುದೇಶವನಪ್ಪಿ ಸೊಬಗನಾಂತಿರುವೊಂದು
ಹಿರಿದಾದ ಮೋಡವನು ಕಂಡನಂದು.

೩

ಹಲವಾರು ಆಸೆಗಳ ಮನದೊಳೊಡಮೂಡಿಸುವ
ಆ ಮುಗಿಲ ಮುಂದೆಸೆಯೊಳೆಂತೊ ನಿಂತು
ರಾಜರಾಜಾನುಚರನುರುಳಿಬಹ ಕಂಬನಿಯ
ತಡೆದಂತೆ ಬಹುಹೊತ್ತು ಚಿಂತಿಸಿದನು.
ಮೇಘದಾಲೋಕನದಿ ಸುಖಿಯಂತರಂಗಮುಂ
ಅನ್ಯಥಾವೃತ್ತಿಯನು ತಾಳ್ವುದೆನಲು
ಕೊರಳ ಬಿಗಿಯಪ್ಪುಗೆಯನಾಶಿಸುವ ಪ್ರಣಯಿಜನ
ದೂರವಿರುವಂತಹರ ಪಾಡದೆಂತು !

೪

ಶ್ರಾವಣವು ಸನ್ನಿಹಿತವೆನೆ ಬಗೆದು ಪ್ರೇಯಸಿಯ
ಜೀವಿತಾಲಂಬನದೊಳರ್ತಿಯಾಗಿ
ತನ್ನ ಕುಶಲವನಾಕೆಗಾ ಮುಗಿಲಮೊಗದಿಂದೆ
ಕಳುಹಿಸುವ ಸಲುವಾಗಿ ಆತನಂದು
ಆದೆತಾನೆ ಅರಳಿರುವ ಕುಟಜ ಕುಸುಮಗಳಿಂದೆ
ಅರ್ಘ್ಯಮಂ ಕಲ್ಪಿಸುತೆ ಪ್ರೀತನಾಗಿ
ಪ್ರೇಮದೊಳ್ನುಡಿಗಳಿಂದಾ ಮುಗಿಲ ತಾಂ ನುಡಿಸಿ
ಸ್ವಾಗತವ ಬಯಸಿದನು ಹರ್ಷದಿಂದೆ.

೫

ಹೊಗೆಯಿಂದೆ ಉರಿಯಿಂದೆ ಗಾಳಿನೀರುಗಳಿಂದೆ
ರೂಪುಗೊಂಡಿರುವ ಜಡಮೋಡವೆತ್ತ !
ಪಟುವಾದ ಕರಣಗಳ ಪಡೆದಿರುವ ಜೀವಿಗಳು
ಕೊಂಡೊಯ್ವ ಸಂದೇಶ ವಿಷಯವೆತ್ತ !
ಔತ್ಸುಕ್ಯದಿಂದಿದನು ಗಣಿಸದೆಯೆ ಗುಹ್ಯಕನು
ಯಾಚಿಸಿದನಾ ಮುಗಿಲ ಕೃಪಣನಾಗಿ.
ಕಾಮಾರ್ತರಾದವರು ಚೇತನಾಚೇತನದೆ
ಕೃಪಣರೆಂಬುದು ನೋಡೆ ಸಹಜಮಲ್ತೆ!

೬

ಲೋಕದೊಳು ಹೆಸರಾಂತ ಪುಷ್ಕಲಾವರ್ತಕಗ-
  ಳೆಂಬೊಗೆದ ವಂಶದವನೆಂದು ಬಗೆವೆ.
ಸುರಪನಾಣೆಯೊಡನಿರುವ ಪ್ರಕೃತಿಪುರುಷನುಮೆಂದು
  ಕಾಮರೂಪಿಯುಮೆಂದು ನಿನ್ನನರಿವೆ.
ವಿಧಿವಶದೊಳಿಂದಂತೆ ಬಂಧು ದೂರದೊಳಿರುವ
  ನಾಂ ನಿನ್ನನೀಗರದಿ ಬೇಡುತಿರುವೆ.
ಅಧಿಗುಣರ ಬೇಡುವುದು ನಿಷ್ಫಲವಾದರದೇನು
  ಅಧಮರೀವುದಕಿಂತ ಲೇಸೆನಿಸದೆ!

೭

ಸಂತಪ್ತರಾದರಿಗೆ ನೀನೆ ಶರಣಾಗಿರುವೆ
  ಹೇ ಪಯೋದನೆ ಅಂತೆ ನಿನ್ನನೆರೆವೆ.
ಧನಪತಿಯ ಕೋಪದಿಂದಗಲಿ ಬಂದಿರುವೆನ್ನ
  ಸಂದೇಶವನೊಯ್ದು ಪ್ರಿಯೆಗೆ ತಿಳಿಸು.
ಅಲ್ಲಿ ಬಹಿರುಪವನದಿ ನೆಲಸಿಂದ ಪರಶಿವನ
  ಶಿರದ ಶಶಿಕಳೆಯ ಬೆಳ್ದಿಂಗಳಿಂದೆ
ಹೊಳೆವ ಹರ್ಮ್ಯಗಳಿರುವ ಯಕ್ಷರೊಡೆಯನ ವಶದ
  ಹೆಸರಾದ ಅಲಕೆಯನು ಕುರಿತು ತೆರಳು.

೮

ಪಥಿಕವನಿತೆಯರೆಲ್ಲ ಪತಿಗಳೈತಪರೆಂದು
  ವಿಶ್ವಾಸದಿಂದಂದು ನಲಿದು ನಿಂದು,
ಮುಂಗುರುಳ ಮೇಲೆತ್ತಿ ಸಡಗರದಿ ನೋಡುವರು
  ಗಗನಪಥವನೇರಿ ಬರುವ ನಿನ್ನಂ.
ನಡುವೆ ನೀಂ ಮೈದೋರೆ ಬೇರನಾವನಿನ್ನವೊಳು
  ತಾನನ್ಯರಾಳಾಗಿ ಬಾಳದವನು
ನಿನ್ನುದಯದೊಳಿರುವಂದು ವಿರಹವಿಧುರೆಯ ಸತಿಯ
  ಬರಿದೆ ತಾಂ ಕಡೆಗಣಿಸಲೆಂತಾರ್ಪನೊ!

೯

ಅನುಕೂಲ ಮಾರುತನು ಮಂದಮಂದಂ ಸುಳಿದು
ನಿನ್ನ ನೂಗಿಸುತಿರುವನಂದದಿಂದೆ.
ಬಿಂಕದಲಿ ಚಾತಕವು ನಿನ್ನ ಎಡವಂಕದಲಿ
ದನಿಗೈಯುತಿಹುದೊಲಿದು ಮಧುರಮಾಗಿ.
ಬಸುರಿನೊಸಗೆಯ ಸೊಗದ ಪರಿಚಯದೊಳಂದದಿಂ-
ದಾಗಸದೆ ಸಿಡುಸರದ ತೋರಣದೊಲು
ಹಾರುವ ಬಲಾಕಗಳು ನಯನ ಸುಭಗನೆ ನಿನ್ನ-
ನನುಸರಿಸಿ ಸೇವಿಸುತೆ ನಲಿವುವತ್ತೆ!

೧೦

ದಿನದಿನಗಳೆಣಿಕೆಯೊಳೆ ನಿರತಳಾಗಿರುವವಳ
ಏಕಪತ್ನಿಯ ಸತಿಯನವಿಪನ್ನೆಯ
ಭ್ರಾತೃಜಾಯೆಯನವಳ ನೀನವಶ್ಯಂ ಸಖನೆ
ತ್ವರಿತಗಮನದೊಳೈದಿ ನೋಡಲಿರುವೆ.
ಕುಸುಮಕೋಮಲಳೆನಿಸಿ ವಿರಹದೊಳು ಬಲುಬಳಲಿ
ಕ್ಷಣಮಾತ್ರದಲಿ ಕಳಚಿ ಬೀಳಲಿರುವ
ಪ್ರಣಯಿಹೃದಯವನವನು ಆಸೆಯೆನುವಾ ಬಂಧ
ವಿಪ್ರಯೋಗದೊಳಿರದೆ ತಡೆದಿರುವುದು.

೧೧

ನಿನ್ನ ಮೊಳಗುಗಳಿಂದೆ ಮಹಿಯೊಳೊಗೆಯೆ ಶಿಲೀಂಧ್ರ
ಬೆಳೆಬರುವ ಧರೆ ಮರೆದವಂಧ್ಯೆಯೆನಿಸೆ
ಕೇಳಲಿನಿದಹ ನಿನ್ನ ಮೊಳಗನವನಾಲಿಸುತೆ
ಮಾನಸ ಸರೋವರವ ಪುಗಲೆಳಸುತೆ
ತಾವರೆಯ ಚಿಗುರಲೆಯ ಪಾಥೇಯಗಳನಾಂತು
ರಾಜಹಂಸ ಸಮೂಹ ನಭದೊಳಂತೆ
ಕೈಲಾಸದಲ್ಲಿವರವೊಲಿದು ನಿನ್ನೊಡಗೂಡಿ
ಜೊತೆಯ ದಾರಿಗರಾಗಿ ನೆರವೀವುವು.

೧೨

ಲೋಕವಂದಿತನಾದ ರಾಮನಡಿಪಾವನೆಯು
  ಗುರುತಿರುವ ಸಾನುಗಳನಾಂತು ಮೆರೆವು
ನಿನ್ನ ಪ್ರಿಯಸಖನಾಗಿ ಉನ್ನತೋನ್ನತನಾಗಿ
  ನಿಂದ ಗಿರಿಯಿದನಪ್ಪಿ ಬೀಳ್ಕೊ ತರಳು.
ಕಾಲಕಾಲಕೆ ನಿನ್ನ ಸಂಯೋಗವನು ಪಡೆದು
  ಚಿರವಿರಹದಿಂಪೊಗೆದ ಕಂಬನಿಯನು
ನಿನಗಾಗಿ ಕಾತರದೆ ಬಿಚ್ಚಿಬಿಚ್ಚಿಸಿ ಸುರಿಸಿ
  ತನ್ನ ಸ್ನೇಹವನುನಿಂತು ತೋರುತಿಹುದು.

೧೩

ನಿನ್ನ ಪಯಣದ ಮಾರ್ಗವಂತಿರುಪ್ಪವೆಂಬುದನು
  ಸಂಪೂರ್ಣಮೆನಸೊರವೆ ಕೇಳು ಜಲದ!
ಬಳಿಕ ಮನವೊಗುವಂತೆ ಸಂದೇಶವನು ಪೇಳ್ವ-
  ನದನು ಕಿವಿಗೊಟ್ಟಾಲಿಸೆನ್ನ ಸಖನೆ!
ಬಳಿಕ ನೀಂ ದಾರಿ ನಡೆ ಬಳಬಳಲಿ ಬಸವಳಿಯೆ
  ಗಿರಿಶಿಖರದೆಡೆಗಳಲಿ ಪದಸನೂಂ,
ಕಡುದೀನನಾದಂದು ನಿರ್ಝರದ ಸ್ರೋತಗಳ
  ನಿರ್ಮಲೋದಕಗಳಂ ಪಾನಗೈದು.

೧೪

ಪರ್ವತಶೃಂಗವನೆ ಪವನನಪಹರಿಸುತಿಹ-
  ನೆಂದೆಣಿಸಿ ಸಿದ್ಧಮುಗ್ಧಾಂಗನೆಯರು
ಚಕಿತ ಚಕಿತೆಯರಾಗಿ ಮೊಗವೆತ್ತಿ ನೋಡುತಿರೆ
  ವೀಕ್ಷಣೋತ್ಸಾಹದೊಳು ವೇಗಗೊಂಡು
ಮಾರ್ಗದೊಳು ಸಂಧಿಸುವ ಕ್ರೂರ ದಿಙ್ನಾಗಗಳ
  ಹಸ್ತಾವಲೇಪಗಳ ಪರಿಹರಿಸುತೆ
ಸರಸ ನಿಚುಳಗಳಿರುವ ಈ ತಾಣದಿಂದೆ ನೀಂ
  ಮುಂದುತ್ತರಾಭಿಮುಖಿಯಾಗಿ ತರಳು!

೧೫

ವಿವಿಧ ಮಣಿರತ್ನಗಳ ಕಾಂತಿ ಸಮ್ಮಿಶ್ರಣದೆ
ಪೊಳೆವ ದೇವೇಂದ್ರಧನು ಕಣ್ಗೊಳಿಸುತೆ
ನಿನ್ನ ಮೈತೊಡವೆನಿಸಿ ಮುಂಗಡೆಯ ಹುತ್ತದಿಂ-
ದೊಡಮೂಡಿ ನಿಂದಂದು ಸೊಬಗಿನಿಂದೆ
ಸ್ಫುರಿತ ಕಾಂತಿಯನಾಂತ ನವಿಲುಗರಿಗಳ ತಳೆದು
ಶೋಭಿಸುವ ಗೋಪಾಲಕೃಷ್ಣನಂತೆ
ನೀಲಿಬಣ್ಣದ ನಿನ್ನ ತನುವಪರ ಕಾಂತಿಯಲಿ
ಮಿಗಿಲಾದ ಶೋಭೆಯಿಂದೆಸೆಯುತಿಹುದು !

೧೬

ಭ್ರೂವಿಲಾಸಂಗಳಲಿ ಅನಭಿಜ್ಞರೆನಿಸಿರುವ
ಜಾನಪದವಧುಗಳಾನಂದದಿಂದೆ
ಪ್ರೀತಿ ತುಂಬಿದ ತಮ್ಮ ಲೋಚನಂಗಳ ತೆರೆದು
ನೀನೆ ಕೃಷಿಗಾಧಾರನೆಂದು ಬಗೆದು
ಕಾತರದೆ ನೋಳ್ಪರದನಾಸ್ವಾದನಂಗೈದು
ಅದೆ ಉತ್ತ ಹೊಲದ ನರುಗಂಪನುಗುವ
ಮೂಲಮನ್ನೇರಿ ನಸುಪಡುವಲಿಗೆ ನೀಂ ಪೋಗಿ
ತಿರುಗಿ ತೆರಳುತ್ತರಕೆ ತೀವ್ರಮಾಗಿ.

೧೭

ಜಲಧಾರೆಗಳ ಸುರಿಸಿ ಕಾಳ್ಕಿಚ್ಚನುಪಶಮಿಸಿ
ಎನಗಿದುಪಕಾರದಿಂದಾಮ್ರಕೂಟ
ದಾರಿ ನಡೆದಾಯಸದ ಬಳಲಿರುವ ನಿನ್ನ ತಾಂ
ತನಿವುವೈ ತಲೆಮೇಲೆ ಸೊಗಸಿನಿಂದೆ.
ಕ್ಷುದ್ರನಾದಾತನುಂ ಆಶ್ರಯವನಾಶಿಸುವ
ಗೆಳೆಯನೈತರುವಂದು ತನ್ನ ಬಳಿಗೆ
ಅವನ ಉಪಕಾರಗಳ ನೆನೆದು ಮೊಗದಿರುಹನೆನೆ
ಉನ್ನತರ ಬಗೆಯನಿನ್ನೆಂತು ಪೇಳ್ವೆಂ !

೧೮

ಕಳಿವಣ್ಗಳಿಂ ತೀವಿರುವ ಕಾನನಾಮ್ರಗಳಿಂದೆ
ಕವಿದ ಸಾನುಗಳಿರುವ ಆಮ್ರಕೂಟ
ತೈಲದಿಂ ನುಣ್ಪೇರ್ದ ವೇಣಿಸೋಲಿಪ ನೀನು
ಅದರ ಶಿಖರಾಗ್ರವನು ಏರಿದಂದು
ನಡುವೆ ಕಪ್ಪಾಗಿರುತೆ ಸುತ್ತೆಲ್ಲ ಬೆಳ್ಪಿನ
ತಿರೆವೆಣ್ಣ ಕೋರವೊ ಶಿವೆಗೆಸಂಗೆ
ಅಮರದಂಪತಿಗಳಿಂದಾಲೋಕನಾರ್ಹನೆನೆ
ಶೋಭಿಸುವೆ ನೋಡಲಿಂತು ನಗಸಿರಿ.

೧೯

ವನಚರವಧೂಜನಗಳಂ ನಲಿದು ವಿಹರಿಸುವ
ವನ್ಯಕುಂಜಗಳೆಡೆಯೊಳೊಲಿದು ನಿಂದು
ನೀರು ಬರಿದಾಗಿರಲು ಬೇಗಬೇಗನೆ ಸಾಗಿ
ಅದರಾಚೆ ದಾರಿಯನು ದಾಂಟಿದಂದು
ಮಾತಂಗದಂಗದೊಳು ವಿರಚಿಸಿದ ಚಿತ್ರದರ
ಭಸ್ಮರೇಖಾವಳಿಯ ಹೋಲುತಿರುವ
ಹಳ್ಳದಿಣ್ಣೆಗಳಿರುವ ವಿಂಧ್ಯಪಾದದ ಬಳಿಯೆ
ಪಸರಿಸಿದ ನರ್ಮದೆಯ ನೋಡಲಹುವೆ.

೨೦

ಮಳೆಗರೆದು ಬರಿದಾಗೆ ಪೊಂದಿ ನೀರ್ ಕಟುವಾದ
ವನಗಜದ ಮದಜಲದಿ ಪರಿಮಳಿಸುತೆ
ನೇರಳೆಯ ಪೊದೆಯಿಂದೆ ಮಂದಗಮನಮನಾಂತ
ನರ್ಮದೆಯ ತೋಯವನು ಮೊಗೆದು ತೆರಳು.
ಇಂತು ಅಂತಸ್ಸಾರವಾದ ನಿನ್ನನು ಪವನನೆ
ಚಲಿಸಲಿಸಲಿಸಲು ಶಕ್ತನಾಗನಲ್ತೆ!
ಪೂರ್ಣತೆಯೆ ಗೌರವಕೆ ಕಾರಣವು; ರಿಕ್ತತೆಯ
ದೆಸೆಯಿಂದೆ ಸರ್ವಮುಂ ಲಘುವೆನಿಸಿಪ್ಪುದು.

೨೧

ಅರೆಬೆಳೆದ ಕೇಸರದೆ ಕಂದುಹಸುರಿನಬಣ್ಣ
ಬಿಂಬಿಸಿವ ನೀಪಗಳ ನೋಡಿ ಸವಿದು
ಜೌಗುನೆಲದಲಿ ಬೆಳೆದ ನೆಲಮುಗುಳುಗಳೊಗೆದ
ಎಳೆಯ ಕಂದಳಿಗಳನು ತಿಂದು ನಲಿದು
ವನ್ಯನೇರಗಳಿಂದಲಧಿಕ ಸೌರಭವುಗುವ
ನೀರುಂಡ ತಿರೆಯು ಹೊಸಕಂಪು ಮೂಸಿ
ಸಂಚರಿಪ ಸಾರಂಗ ನಿವಹ ತಾಂ ಸೂಚಿಪುದು
ಹೊಸನೀರ ಹಸಿಗರೆವ ನಿನ್ನ ಪಥಮಂ.

೨೨

ನೀರ್ವನಿಯ ಪಿಡಿವೊಂದು ಚತುರತೆಯನಾಂತಿರುವ
ಚಾತಕಂಗಳ ನೋಡಲೆಳಸಿದಂದು
ಪಂಕ್ತಿಪಂಕ್ತಿಯೊಳಿನಿದು ಹಾರುವ ಬಲಾಕಗಳ
ನೊಂದೆರಡು ಎಂದೆಣಿಸಿ ತೋರಲೆಂದು
ರಮಣಿಯರನೊಡಗೂಡಿ ಸಿದ್ಧರಾಗಸದೊಳಿರೆ
ಮೇಲೆ ನೀಂ ಮೊಗಮೋರಿ ಗುಡುಗಿದಂದು
ಸೋತ್ಕಂಠ ಸಹಚರಿಯರಾಲಿಂಗನಂ ಪಡೆದು
ನಿನ್ನನಭಿನಂದಿಸುವರಂದದಿಂದೆ.

೨೩

ನನ್ನ ಮನದಿನಿಯಳನು ಸಂತವಿಪ ಸಲುವಾಗಿ
ಸಡಗರದೆ ನೀಂ ಪೋಗಲೆಳಸಿದಂದು
ಮಲ್ಲಿಗೆಯ ಕಂಪುಗುವ ಮಲೆಮಲೆಗಳೆಡೆಗಳಲಿ
ಬರಿದೆ ಕಾಲವ ಕಳೆವೆಯೆಂದು ಬಗೆವೆ.
ಕಣ್ತುಂಬಿ ಸೂಸುತಿರುವಾನಂದಬಾಷ್ಪದಿಂ
ಕೇಕಾರವಂಗೈದು ಸ್ವಾಗತಿಸುವ
ನವಿಲುಗಳ ಆತಿಥ್ಯವನು ಪಡೆದು ಮೇಗೆಂತೊ
ದ್ರುತಗತಿಯೊಳಲ್ಲಿಂದೆ ತೆರಳಲೆಳಸು.

೨೭

ಹೊದೆಹೊರೆಸು ಪಸಿಬಿರಿದ ಕೇದಗೆಯ ಗರಿಗಳಿಂ
ಬೆಳ್ಪಾಂತ ಉಪವನದ ಬೇಲಿಯಿಂದೆ
ಗೃಹಬಲಿಗೆ ಗುಂಜಿಸುವ ಪಕ್ಷಿಸಂಕುಲವೊಲಿದು
ಗೂಡುಗಟ್ಟುತಲಿರುವ ಮರಗಳಿಂದೆ
ನೀಲಿಬಣ್ಣವನಾಂತ ಕರಿವಣ್ಣುಗಳಿರುವ
ಕರವೆಸೆವ ನೇರಳೆಯ ಬನಗಳಿಂದೆ
ಕೆಲದಿನವೆ ತಂಗಿರುವ ಹಂಸನಿಚಯಗಳಿಂದೆ
ದಾಶಾರ್ಣದೇಶ ಸೊಂಪಿಸಿಪ್ಪುದಲ್ಲಿ.

೨೮

ಲೋಕದೊಳು ಹೆಸರಾದ ವಿದಿಶಾಪ್ರಥ ಸದಾ
ರಾಜಧಾನಿಯನಿದನು ಸೇರಿ ನೀನು
ಭ್ರೂಭಂಗದಂತಿರುವ ಚಲಿಸುವತೆರೆಗಳೆಸೆಸು
ಅಧರದಂತೆಸೆದಾದ ಜಲವ ತಳೆದು
ಮೆರೆವ ವೇತ್ರಾವತಿಯನಿರದ ಸುಖಿಸುವವೋಲು
ನಸುಬಾಗಿ ಪ್ರಮದಾಧರ ಸೋಂಕಿನಿಂದೆ
ಪಡೆವೆಡೆಯೊಳಿದರ ನವಿಸುರತಕನಸು ಕುಡಿದಂದು
ಕಾಮುಕನ ಸಂಪೂರ್ಣ ಫಲವ ಪಡೆವೆ.

೨೯

ಪಣ್ಯವನಿತಾಜನರ ಸುರತ ಪರಿಮಳವನುಗುವ
ಸುಂದರ ಶಿಲಾವೇಶ್ಮನಿವಹದಿಂದ
ನಾಗರಿಕರುದ್ದಾಮ ಯೌವನೋತ್ಕರ್ಷಣವನು
ಆವ ಪರ್ವತ ಜಗಕೆ ಸಾರುತಿಹುದೊ
ಪ್ರೌಢಪುಷ್ಪಗಳೆಸೆವ ನೀಪವೃಕ್ಷಗಳಿಂದ-
ಲಾವ ಪರ್ವತ ಜನರ ಮನಸೆಳೆಯುತಿರೆ
ನಿನ್ನ ಸಂಸ್ಪರ್ಶದಲಿ ಪುಳಕಗೊಂಡವೊಲಿಹುದೊ
ಅದುವೆ ನೀಚೈರ್ಗಿರಿಯೊಳಲ್ಲಿ ನೆಲಸು.

೨೭

ಬಳಿಕ ಮುಂದುತ್ತರಿಸಿ ವನನದೀತೀರದೊಳು
ಉಪವನದ ಮಲ್ಲಿಗೆಯ ಮೊಗ್ಗಗಳಿಗೆ
ಹೊಸಮಳೆಯ ನೀರ್ವನಿಗಳಭಿಷೇಚನಂಗೈದು
ಬೆಮರಿಳಿವ ಕದಪುಗಳನೊರಸುವಂದು
ಕಿವಿಯ ನೈದಿಲೆ ಪೂವು ಬಾಡಿ ಕೆಳಗುಸುರುತಿರೆ
ಪೂದಿರಿಯುವಬಲೆಯರ ಮೊಗದ ಮೇಲೆ
ಕ್ಷಣ ಮಾತ್ರ ಪರಿಚಯದ ನೆರಳಿನಾಸರೆಯಾಗಿ
ಮತ್ತೆ ಮುಂದುತ್ತರಕೆ ತೆರಳು ಸಖನೆ.

೨೮

ಉತ್ತರದ ದೆಸೆಗೆಂದು ಪಯಣ ಬೆಳೆಸುವ ನಿನಗೆ
ಉಜ್ಜಯಿನಿಯಾ ದಾರಿ ಬಳಸಾದರುಂ
ಅಲ್ಲಿನ ಮಹೋತ್ತುಂಗ ಸೌಧವರಮನೆಗಳಲಿ
ಸ್ನೇಹವಿರಹಿತನೆನಿಸಿ ಮೊಗದಿರುಹದ
ಬಳ್ಳಿಮಿಂಚಿನ ಬೆಳಗಿಗಿರದೆ ಭಯದಿಂ ಬೆದರಿ
ಚಲಿಸುತಿರುವಾ ನಗರದಂಗನೆಯರ
ಚಕಿತ ಲೋಲಾಪಾಂಗ ಲೋಚನಂಗಳ ನೋಡಿ
ನೀನಲ್ಲಿ ರಮಿಸದಿರೆ ವಂಚಿತನಹೆ.

೨೯

ಅಲೆಗಳುಲ್ಲೋಲದಲಿ ಕಲರವಂಗೈಯುತಿಹ
ಹಕ್ಕಿಗಳ ಸಾಲಿನೊಡ್ಯಾಣದಿಂದೆ
ಘುಮುಘುಮುಕಿ ಹರಿವಂನು ಸುಭಗಮೆನೆ ತೋರುತಿಹ
ಆವರ್ತವೆನುವ ಸುಳಿನಾಭಿಯಿಂದೆ
ಮೆರೆವ ನಿರ್ವಿಂಧ್ಯೆಯನು ಬಳಿಸಾರ್ದು ಸಂತಸದೆ
ಅಲ್ಲಿ ರಸಲೋಲನೆನೆ ಸುಖಿಸು ಸಖನೆ
ವನಿತೆಯರಿಗಿನಿಯರೊಳು ಒಲವ ಬೇಡುವುವರಲಿ
ವಿಲಸನವೆ ತಾನಲ್ತೆ ಮೊದಲ ನುಡಿಯು.

೩೦

ವೇಣಿವೊಲು ತೆಳುವಾಗಿ ಹರಿವ ನೀರ್ಪೊನಲಿಂದೆ
ಕೃಶಳಾಗಿ ತೋರುವಾ ನಿರ್ವಿಂಧ್ಯೆಯು
ದಡವೆಡೆಯ ತರುಗಳಿಂನುದುರಿ ಬೀಳುತಲಿರುವ
ಹಣ್ಣೆಲೆಗಳಿಂದೆ ತಾಂ ಬೆಳ್ಪನಾಂತು
ತನ್ನ ವಿರಹವ್ಯಥೆಯ ದಾರುಣಾವಸ್ಥೆಯಲಿ
ನಿನ್ನ ಸೌಭಾಗ್ಯವನೆ ಸೂಚಿಸುತಿರೆ
ಸಂಗಮದ ಸೊಗದಿಂದಲಾ ಸಿಂಧು ಮೈತುಂಬು-
ವಂದದೊಳು ನೀನವಳ ನೋವಗೊಳಿಸು.

೩೧

ವತ್ಸರಾಜನ ಕಥೆಯನರಿತ ಕೋವಿದರಿರುವ
ಊರ ಹಿರಿಯರ ನೆಲೆಯನಾವಂತಿಯ
ಹಿಂದಿರಿಸಿ ಸಿರಿಯು ಹರಹಿನ ನೆಲೆಯು ತಾನೆನಿಸುವ
ಉಜ್ಜಯಿನಿಯನು ಕುರಿತು ತೆರಳಿ ಮುಂದೆ
ತಮ್ಮ ಸುಚರಿತ ಫಲವು ಮುಗಿದು ಬರುತಿರುವಂದು
ದೇವಲೋಕದ ಜನರು ತಿರುಗಿ ಬಂದು
ಸುಕೃತ ಶೇಷಗಳಿಂದ ಧರೆಗೆ ತಂದಿಳಿಸಿರುವ
ದಿವದೊಂದು ಖಂಡದಂತೆ ಕಂಗೊಳಿಪುದು.

೩೨

ಅಲ್ಲಿ ಶಿಪ್ರಾನದಿಯ ಮೇಲೆ ಬೀಸುವ ಗಾಳಿ
ಉದಯಕಾಲದೊಳುಲಿವ ಸಾರಸಗಳ
ಮದಕಲದ ಕೂಜಿತವ ಹಿರಿದಾಗಿ ಬೆಳೆಯಿಸುತೆ
ಬಿರಿದ ತಾವರೆಯರಳ ಕಂಪನಾಂತು
ಭೋಗದಭಿಲಾಷೆಯಲಿ ಚಾಟುವಚನವ ನುಡಿದು
ಕಾಮಿನಿಯ ಸಂತವಿಸುವಿನಿಯನಂತೆ
ಅಂಗನೆಯರೊಡಲಿಗನುಕೂಲ ಭಾವದಿ ಸುಳಿದು
ಪೀಟದಾಯಾಸವನು ನೀಗಲಿಹುದು.

೩೩

ತಾರಹಾರಗಳೆನಿತೊ ತರಳ ಘುಟಿಕಗಳೆನಿತೊ
ಶಂಖ ಶುಕ್ತಿಗಳೆನಿತೊ ಕೋಟಿ ಕೋಟಿ
ಎಳೆಹುಲ್ಲಿನಂತಿರುವ ಹಸುರುಬಣ್ಣದ ಕಾಂತಿ
ಕುಡಿಯೊಡೆದು ಹೊಳೆವ ಮರಕತಗಳೆನಿತೊ!
ಹವಳಗಳ ಹರಳೆನಿತೊ ಉಜ್ಜಯಿನಿಯಂಗಡಿಯ
ಬೀದಿಗಳ ನೋಡಿದರೆ ಹೊಳೆವುದಂದು
ಮುನ್ನೀರು ತನ್ನೆಲ್ಲ ರತ್ನಗಳನಿಲ್ಲಿರಿಸಿ
ತಾಂ ಬರಿಯ ನೀರನಿಧಿಯಾದುದೆಂದು.

೩೪

ಇದುವೆ ತಾಣದೊಳಂದು ಪ್ರದ್ಯೋತಪುತ್ರಿಯನು
ಬಂದು ಅಪಹರಿಸಿದನು ವತ್ಸರಾಜಂ
ಮೇಣಿದುವೆ ತಾಣದಲಿ ಆನರೇಂದ್ರನದೆನುವ
ಹೇಮತಾಳದ್ರುಮದ ವನವಿರ್ದುದು
ಮತ್ತಿದುವೆ ತಾಣದಲಿ ನಲಗಿರಿಯು ಮದವೇರಿ
ಕಂಬವನು ಕಿತ್ತೆಸೆದು ಹಾರಾಡಿತು
ಈ ತೆರನ ಕತೆಗಳನು ಹೇಳುತ್ತ ಬಲ್ಲ ಜನ-
ರಾಗಂತುಕರನಲ್ಲಿ ಮುದಗೊಳಿಪರು.

೩೫

ಎಲೆಹಸುರು ಬಣ್ಣದಲಿ ದಿನಕರನ ತೇಜಿಗಳ
ಹೋಲುತಿಹ ವಾಹಕಗಳಿರುವುವಲ್ಲಿ
ಶೈಲದಂತುತ್ತುಂಗಮೆನಿಸಿದಾನೆಗಳಲ್ಲಿ
ನಿನ್ನವೊಲು ಮದಜಲದ ಮಳೆಗರೆವುವು.
ಸಮರ ಸಂರಂಭದಲಿ ದಶಮುಖನಿಗೆದುರಾಗಿ
ಚಂದ್ರಹಾಸಮೊಳಾವ ಕಲೆಗಳಿಂವೆ
ಆಭರಣಕಾಂತಿಗಳ ಮರೆಸಿ ಮೆರೆವಂತಿರುವ
ಯೋಧಾಗ್ರಗಣ್ಯರಿಹರಲ್ಲಿ ನೆಲಸಿ.

೩೬

ಜಾಲಮಾರ್ಗದಿನೊಗೆವ ಕೇಶಸಂಸ್ಕಾರದಿನಿ
ಧೂಪದಿಂದೊಡಗೂಡಿ ಪುಷ್ಟನಾಗಿ
ಬಂಧುವೆನುವಾದರದೆ ಗೃಹಮಯೂರಗಳೀವ
ನೃತ್ಯೋಪಹಾರದಿಂ ತುಷ್ಟನಾಗಿ
ಕುಸುಮ ಸೌರಭವುಗುವ ಲಲಿತವನಿತಾಪಾದ
ರಾಗಾಂಕಿತಂಗಳಿಹ ಹರ್ಮ್ಯಗಳಲಿ
ಉಜ್ಜಯಿನಿಯೈಶ್ವರ್ಯ ಲಕ್ಷ್ಮಿಯನು ನೋಡುತ್ತೆ
ದಾರಿ ನಡೆದಾಯಸವ ನೀಗಲಿರುವೆ.

೩೭

ಭರ್ತೃವಿನ ಕಂಠದೊಲು ಛವಿಯಾಂತನಿವನೆಂದು
ನಿನ್ನ ನೋಡುತ ನಲಿಯೆ ಪ್ರಮಥಗಣವು
ಜಲಕೇಳಿಯೊಳು ಮೆರೆವ ಯುವತಿಯರ ಮೀಹದಿಂ
ಘಮಘಮಿಪ ಗಂಧವತಿಯತ್ತಣಿಂದೆ
ನೈದಿಲೆಯ ನರುಗಂಪಿನೊಡಗೂಡಿ ಸುಳಿದು ಬಹ
ತಂಗಾಳಿಯಲಿ ತೊನೆವ ಉಪವನದೆಡೆ
ತೆರಳು ನೀಂ ತ್ರಿಭುವನಕೆ ಗುರುವಾದ ಚಂಡೀಶ
ನೆಲಸಿರುವ ಪುಣ್ಯಮಯಧಾಮದೆಡೆಗೆ.

೩೮

ನೀನಲ್ಲಿ ಮೆರೆಯುವ ಮಹಾಕಾಳಮಂದಿರವ
ಬೇರಾವ ವೇಳೆಯಲಿ ಸಾರಿರ್ದರುಂ
ನಯನ ದೇಶವ ಮೀರಿ ದೂರದ ದಿಗಂತದಲಿ
ಸೂರ್ಯ ಮುಳುಗುವವರೆಗೆ ಅಲ್ಲಿ ನೆಲಸಿ
ಲೋಕವಂದಿತನಾದ ಶೂಲಿಯಾರಾಧನೆಗೆ
ಗುಡುಗುಗಳ ದನಿಗೈದು ಪಟಹವಾಗು
ಗಂಭೀರತರಮಾದ ನಿನ್ನ ಗರ್ಜಿತಗಳಿಗೆ
ಮುಂದೆ ನೀಂ ಸಂಪೂರ್ಣ ಫಲವ ಪಡೆವೆ.

೩೯

ನೃತ್ಯಸೇವಾಭರದೊಳಡಿಯನೆತ್ತಿಡುವಂದು
ಕಟಿಯ ಕಾಂಚೀದಾಮ ಝಣಝಣರಿಸೆ
ರತ್ನವರ್ಣಚ್ಛವಿಯ ವಳಿಯ ಚಾಮರ ಮಿನುಗೆ
ಲೀಲೆಯಿಂ ಪಿಡಿದದನು ಬೀಸುವಂದು
ಕ್ಲಾಂತ ವೇಶ್ಯಾಜನದ ನಖಪದಕೆ ಸುಖವೀವ
ಮೊದಲ ಮಳೆಪನಿಗಳನು ನೀನು ಸುರಿಯೆ
ಮಧುಕರ ಶ್ರೇಣಿವೊಲು ನಿಡಿದಾದಪಾಂಗಗಳ
ನಿನ್ನ ಕಡೆಗೆಸೆಯುವರು ಪ್ರೀತಿಯಿಂದೆ.

೪೦

ಆ ಬಳಿಕ ಶಿವನ ನಿಡುತೋಳುಗಳ ತರುವನವ
ಮಂಡಲಾಕಾರದಲಿ ಬಳಸಿ ನಿಂದು
ಅಭಿನವ ಜಪಾಕುಸುಮುವೆಂತಂತೆ ಕೆಂಪಾಗಿ
ಬೈಗುವೆಳಗನು ತಳೆದು ಸುಭಗನಾಗಿ
ಉದ್ವೇಗ ಶಮನಗೊಳೆ ನಿಶ್ಚಲಾಕ್ಷಿಗಳಿಂದೆ
ಶಿವೆ ನಿನ್ನ ಭಕ್ತಿಯನ್ನೀಕ್ಷಿಸುತಿರೆ
ನಾಟ್ಯದಾರಂಭದಲಿ ಪಶುಪತಿಯ ಆರ್ದ್ರಗಜ
ಚರ್ಮಾಭಿಲಾಷೆಯನು ನೀಗಲೆಳಸು.

೪೧

ನೋಟವನು ತಡೆಗೈದು ಕವಿದ ಕಗ್ಗತ್ತಲೆಯ
ರಾಯಬೀದಿಯೊಳಲ್ಲಿ ಉಜ್ಜಯನಿಯ
ಯೋಷಿತೆಯರಂದ ಮಿಗೆ ರಮಣವಸತಿಯ ಕುರಿತು
ಸಾನುರಾಗದಿ ತೆರಳಲನುವಾಗಿರೆ
ಕನಕ ನಿಕಷದ ತೆರದಿ ಹೊಳೆವ ಸೌದಾಮಿನಿಯ
ಬೆಳಕಿನಿಂ ನೀನವರ ದಾರಿ ತೋರು
ಮೊದಲೆ ಭಯಚಕಿತರಹ ಯೋಷಿತೆಯರವರ ನೀಂ
ಮಳೆಗರೆದು ಮೊಳಗಿರಿದು ಬೆದರಿಸದಿರು.

೪೨

ಚಿರವಿಲಸನೋದ್ವೇಗ ಭರದಿಂದೆ ಕಡುಬಳಲಿ
ಖೇದಗೊಳೆ ನಿನ್ನ ಸತಿ ಸೌದಾಮಿನಿ
ಸುಪ್ತ ಪಾರಾವತಗಳಿರುವ ಸೌಧಾಗ್ರದಲಿ
ನೀನುಮಾಯಾಸವನು ನೀಗಲೆಂದು
ಇರುಳು ನೂಕಲು ತಂಗಿ ನೇಸರುದಯಿಸುವಂದು
ಉಳಿದ ದಾರಿಯ ಕುರಿತು ತೆರಳು ಮುಂದೆ
ಕೈಕೊಂಡ ಸಖರರ್ಥ ಕೃತ್ಯಗಳನೆಸಗಲಿರೆ
ಸಾವಕಾಶಂಗೈವುದುಚಿತಮಲ್ತು.

೪೩

ನೇಸರುದಯಿಸುವಂದು ಕಾಮಿಜನಗೈತಂದು
ಮುನಿಸಿನಿಂ ಮೊಗದಿರುಹಿದಂಗನೆಯರ
ಕಂಬನಿಗಳಂ ತೊಡೆದು ಸಂತವಿಪ ಸಮಯವದು
ನೀನಂತೆ ದಿನಕರನ ತಡೆಯಬೇಡ.
ಪದುಮಲತೆಗಳ ನೋಂಕಿ ಕಮಲವದನವನೆತ್ತಿ
ಹಿಮಕಣದ ಕಣ್ಣೀರನೊರಸಲೆಂದು
ಹಿಂದಿರುಗಿ ಬರುತಿರುವ ದಿನಕರನ ಕಿರಣಗಳ
ತಡೆದಂದು ಅವನುರಿದು ಕೋಪಗೊಳುವಂ

೪೪

ವಿಮಲಾಂತರಂಗದೊಲು ನಿರ್ಮಲೋದಕವಿರಲು
ಗಂಭೀರೆ ತಾನಿರಲು ಪ್ರೇಯಸಿವೊಲು
ಛಾಯಾತ್ಮನಾದರೂ ಪ್ರಕೃತಿಸುಭಗನೆ ನಿನ್ನ
ನಾಕೆ ತಿಳಿನೀರಿನಲಿ ತಳೆದಿರುವಳು.
ಅದುವೆ ಕಾರಣದಿಂದೆ ಸಂಯಮಿಯವೋಲಿರದೆ
ಕುಮುದದೊಲು ಬೆಳ್ಪೆಸೆವ ಗಂಭೀರೆಯ
ಚಟುಲತರ ಶಫರಗಳ ಚಂಚಲೋದ್ವರ್ತನಗ
ಳಾಲೋಕಗಳನೆಂತು ವ್ಯರ್ಥಗೈವೆ.

೪೫

ತಟನಿತಂಬವದಿನಿತು ತೆರೆದು ತೋರುವ ತೆರದಿ
 ವಾನೀರ ಶಾಖೆಗಳ ಕರಗಳಿಂದೆ
ನಸುವೆತ್ತಿ ಪಿಡಿದಿರುವ ನೀಲಬಣ್ಣದಿನೆಸೆವ
 ಆ ನದಿಯ ನೀರುಡೆಯನಿರದೆ ಸೆಳೆದು
ಮೇಲೆ ನೀನಾಗನದೆ ಜಗುಳಿ ಕೆಳಗಿಳಿಯುತಿರೆ
 ಪಯಣ ಸಮನಿಪುದೆಂತು ನಿನಗೆ ಸಖನೆ !
ರುಚಿಯನರಿತಿಪ ರಸಿಕನಾವನೀ ಲೋಕದಲಿ
 ವಿವೃತ ಜಘನೆಯನಂತು ತೊರೆಯಲಹನೊ !

೪೬

ನಿನ್ನ ಮಳೆವನಿಗಳಿಂ ಮೈಯುಬ್ಬಿ ನಾಂದಿಳೆಯ
 ತನಿಸೊಗಡಿನೊಡವೆರೆದು ಕಮ್ಮಿತಾಗಿ
ಕಾಡಾನೆಗಳ ಬಳಗಮಾನಂದದಿಂ ಮೂಸಿ
 ಘೀಳಿಡುತೆ ಪೀರ್ವಂದು ಮಂದವಾಗಿ
ಕಾಡು ಅತ್ತಿಯ ಮರದ ಪಣ್ಗಳಂ ಗಳಿಯಿಸುತೆ
 ಸುಳಿವಂದು ತಣ್ಣನೆಯ ಗಾಳಿಯಾಗಿ
ಮಂದ ಮಂದಾಗಮದ ಮಂದಾನಿಲಂ ಬೀಸಿ
 ನಿನ್ನ ಕೊಂಡೊಯ್ಯುವನು ದೇವಗಿರಿಗೆ.

೪೭

ದೇವಗಿರಿಯಲಿ ಮತ್ತೆ ನಿತ್ಯಸನ್ನಿಹಿತನಹ
 ಷಣ್ಮುಖಸ್ವಾಮಿಯನು ಕಾಣುವಂದು
ಹೂಮುಗಿಲವೋಲಿರುವ ಸೊಗದ ರೂಪವನಾಂತು
 ಪ್ರೇಮಗಂಗಾಜಲದೊಳಾರ್ದ್ರಮಾದ
ಪುಷ್ಪಗಳ ಮಳೆಯಿಂದಲಾ ಕುಮಾರನ ಮಿಸಿಸು
 ವಾಸವನ ಸೇನೆಯನು ಕಾಯಲೆಂದು
ಚಂದ್ರಶೇಖರನಂದು ಅಗ್ನಿಮುಖದೊಳಗಿರಿಸಿ
 ದಾತನತ್ಯಾದಿತ್ಯ ತೇಜನಲ್ತೆ !

೪೮

ಕಾಂತಿರೇಖಾವಲಯ ವಿನ್ಯಾಸದಿಂದೆಸೆವ
ಕೆಳಗುಸುರಿದಾ ನವಿಲುಗರಿಯನಾಯ್ದು
ಮಗನ ಮೋಹಮೊಳವನು ಗೌರಿಯಾದರದಿಂದೆ
ಕುವಲಯದ ದಳವೊಡನೆ ಕಿವಿಯೊಳಿರಿಸೆ
ಶಿವನ ಶಶಿಕಲೆಯಿಂದ ಬೆಳ್ಪಡರ್ದಪಾಂಗಮಿಹ
ಪಾವಕಿಯ ವಾಹನವನಾ ಶಿಖಿಯನು
ಕುಣಿಸು ಮಾರ್ದನಿ ಕೊಡುವ ಪರ್ವತಾಗ್ರಮನೇರಿ
ಗುರುತರದ ಗರ್ಜನೆಯ ದನಿಗಳಿಂದೆ.

೪೯

ಇಂತು ಶರವಣಭವನ ಷಣ್ಮುಖನನರ್ಚಿಸುತೆ,
ಮಳೆಯ ತುಂತುರ್ವನಿಯು ಬೀಳ್ವುದೆಂದು
ಕರದೆ ವೀಣೆಗಳಿರುವ ಸಿದ್ಧಯುಗಳಗಳಂದು
ಭಯದಿಂದೆ ಹಿಂಜರಿದು ದಾರಿಬಿಡಲು ;
ಮುಂದುಮುಂದುತ್ತರಿಸಿ ಗೋಯಜ್ಞದಿಂಮೊಗೆದು
ಸ್ರೋತರೂಪವನಾಂತು ಭೂಲೋಕದಿ
ರಂತಿದೇವನ ಕೀರ್ತಿ ತಾನೆಂಬ ತೆರನೆಸೆವ
ಚರ್ಮಣ್ವತೀನದಿಯ ಸನ್ಮಾನಿಸು.

೫೦

ಶ್ರೀಹರಿಯ ವೈಸಿರಿಯು ಕದಿವವೋಲಿಹ ನೀನು
ನೀರು ಕುಡಿವುದಕೆಂದು ಬಾಗಿದಂದು
ಹಿರಿದಾದರೂ ನೋಡೆ ದೂರವಿರುವುದರಿಂದೆ
ಕಿರಿದಾಗಿ ತೋರುತಿಹ ನದಿಯ ನೀರಂ ;
ನಡುವೆ ಒಂದೇ ಒಂದು ತೋರವಾಗಿರುವಂಥ
ಇಂದ್ರನೀಲದ ಮಣಿಯನಾಂತು ಎಸೆವ
ಭೂಮಿದೇವಿಯ ಕೊರಳ ಮಣಿಹಾರವೆಂದೆಣಿಸಿ
ಖೇಚರರು ನಿನ್ನನೊಲಿದೀಕ್ಷಿಸುವರು.

೫೧

ಆ ನದಿಯನುತ್ತರಿಸಿ ತೆರಳು ನೀನುತ್ತರಕೆ
ಬಳ್ಳಿ ಹುಬ್ಬಿನ ಹಾವಭಾವವರಿತು
ಕಣ್ಣೆವೆಯ ಹಾರಿಸುತೆ ಹೊಮ್ಮಿ ಹೊಳೆಯುವ ಕರಿಯ
ಕಾಡಿಗೆಯ ತೆರಸೆಸೆವ ಕಂಗಳಿಂದೆ
ಕುಂದಸುಮ ಚಲನಾನುಸಾರಿಯಹ ಮಧುಕರನ
ಕಾಂತಿಯನು ಅಪಹರಿಸುವಂತೆಸೆಯುವ
ದಶಪುರ ವಧೂಜನರ ನೇತ್ರಕೌತೂಹಲಕೆ
ನಿನ್ನಾತ್ಮ ಬಿಂಬಮಂ ಪಾತ್ರಮೆನಿಸು.

೫೨

ಬಳಿಕ ಬ್ರಹ್ಮಾವರ್ತವೆನುವ ಜನಪದವಿರುವು
ದದನು ಛಾಯಾಮಾತ್ರದಿಂದಲೈದಿ,
ನೀನು ಬಲ್ಮಳೆಗರೆದು ಸುರಿವ ಜಲಧಾರೆಯಲಿ
ಬಿರಿದ ನೀರೇಜಗಳ ಮುಸುರುವಂತೆ
ನಿಶಿತವಹ ನೂರಾರು ಬಾಣಗಳ ಮಳೆಗರೆದು
ನೃಪರ ಮುಖಕಮಲಗಳ ನರನುಮಂತೆ
ಮುಸುರಿ ಕ್ಷಾತ್ರವ ಮೆರೆದ ರಣಭೂಮಿಯಾಗಿರುವ
ಆ ಕುರುಕ್ಷೇತ್ರವನು ಸಾರು ಮುಂದೆ.

೫೩

ತನ್ನ ಸತಿ ರೇವತಿಯ ಲೋಚನಾಂಕಮನಾಂತ
ತನಗೆ ಅತಿಹಿತವಮಾದ ಸುರೆಯನುಳಿದು
ಬಾಂಧವರ ಮಮತೆಯಲಿ ಸಮರಭೂಮಿಯನುಳಿದು
ಬಲರಾಮನಾ ಸರಸ್ವತಿಯನೈದಿ
ಆದರ ಜಲಸೇವನೆಯೊಳಂಮ ಶುಚಿಯಾದನೆನೆ
ಆ ಸರಸ್ವತಿನದಿಯ ಪುಣ್ಯಜಲವ
ನೀನುಮಾಸ್ವಾದಿಸುತೆ ಹೃದಯ ಶುದ್ಧಿಯ ಪಡೆದು
ವರ್ಣಮಾತ್ರವೆ ಕೃಷ್ಣನೆನಿಸು ಸಖನೆ.

೫೪

ಸಗರರಾಜಕುಮಾರರಂದು ದಿವವೇರಲಿರೆ
  ವಿರಚಿಸಿದ ಸೋಪಾನ ಪಂಕ್ತಿಯೆನುವ
ಗೌರಿದೇವಿಯ ಮುಖದ ಭ್ರುಕುಟಿರಚನೆಯನಿರದೆ
  ನೊರೆಯಿಂದೆ ನಗುವಂತೆ ತೋರುತಿರುವ
ಶಿರದ ಚಂದಿರನೊಡನೆ ಶಂಭುವಿನ ಕೇಶವನು
  ತೆರೆಗೈಗಳಿಂಪೊತ್ತಿ ಹಿಡಿದೆಳೆಯುವ
ಕನಖಲದ ಸಾರೆಯೊಳು ಹಿಮಗಿರಿಯನಿಳಿದುಬಹ
  ಜಾಹ್ನವಿಯ ಸುರನದಿಯ ನೋಡಲಿರುವೆ.

೫೫

ಹಿಮ್ಮೆಯ್ಯನಾಗಸದೊಳೂರಿ ಮುಮ್ಮೆಯ್ಯಿಂದೆ
  ಇಂದ್ರನೈರಾವತದ ತೆರೆಲ್ವ ತೆರದಿ
ತಿರುಗಿ ನದಿಗೆದುರಾಗಿ ಜಗುಳಿ ಕೆಳನೊಗವಾಗಿ
  ನಿರ್ಮಲ ಸ್ಫಟಿಕದಂತೆಸೆಯುತಿರುವ
ಬೆಳ್ಪೊನಲ ಸುರನದಿಯ ನೀರ್ಗುಡಿಯಲೆಳಸುತಿರೆ
  ನಿನ್ನ ಕರಿಮೈ ನೆಳಲು ನೀರೊಳೊಂದಿ
ಅಸ್ಥಾನದೊಳು ಯಮುನೆ ತನ್ನೊಡನೆ ಸೇರಿತೆನೆ
  ಗಂಗೆ ಕಣ್ಗೊಳಿಸುವಳು ಸುಭಗೆಯಾಗಿ

೫೬

ಕುಳ್ಳಿರ್ದ ಕತ್ತುರಿಯ ಮಿಗಮುದದ ಗಂಧದಿಂ
  ಮಘಮಘಿಪ ಶಿಲೆಗಳಿಹ ಕಂಪಿನೆಡೆಯ
ಹಿಮಸಮೂಹಗಳಿಂದೆ ಗೌರವರ್ಣಮನಾಂತ
  ಗಂಗೆಯುಗಮಿಸುತಿರುವ ತುಹಿನಗಿರಿಯ
ಸಾರಿ ನೀಂ ದಾರಿಪಡೆದವಲಸಿಕೆಯ ನೀಗಲೆಂ-
  ದಾ ಗಿರಿಯ ಶಿಖರದಲಿ ನಿಲಿಸಿದಂದು
ಅಚ್ಚ ಬೆಳ್ಪಿನೊಳೆಸೆವ ಹರನ ವಾಹನನಗೆದು
  ತಾಳ್ದ ಕೆಸರಿನವೋಲು ಶೋಭಿಸಲಿಹೆ.

೫೭

ಬನಗಾಳಿ ಬೀಸುತಿರೆ ಸರಳ ತರುಶಾಖೆಗಳ
ಸಂಘರ್ಷದಿಂದೊಗೆದ ಕಿಡಿಗಳಿಂದೆ
ಚರಿಪ ಚಮರೀಮೃಗದ ವಾಲಭಾರಗಳುರಿಯೆ
ಕಾಳ್ಗಿಚ್ಚು ಹಿಮಗಿರಿಯ ಬಾಧಿಸುತಿರೆ
ಧಾರಾಸಹಸ್ರಗಳ ಸುರಿಸಿ ನೀನದನಂತೆ
ಸಂಪೂರ್ಣಮೆನಲೊಡನೆ ತವಿಸಲೆಳಸು
ಆರ್ತಜನರಾಪತ್ತನುಪಶಮನಗೊಳಿಸುವುದೆ
ಉತ್ತಮನ ಸಂಪತ್ತಿಗುಚಿತ ಫಲವು.

೫೮

ಸಿದ್ಧರಿಂದನವರತ ಬಲಿಸರಕೆಗೊಳ್ಳುತ್ತೆ
ಅಂದದಿಂದರೆಯೊಳಗೆ ಮೂಡಿ ನಿಂದ
ಅರ್ಧೇಂದು ಮೌಳಿಯಾ ಚರಣವಿನ್ಯಾಸವನು
ಭಕ್ತಿಯಲಿ ಬಲವಂದು ಬಾಗಿ ನಮಿಸು
ಶ್ರದ್ಧಾತ್ಮರಾದವರು ಅದರ ದರ್ಶನದಿಂದೆ
ಪಾಪವೆಲ್ಲವ ಕಳೆದು ಪುಣ್ಯವಶದಿ
ದೇಹವಿವನುಳಿದಂದು ಶಾಶ್ವತದ ಗಣಪದವ
ಅಲ್ಲಿ ಕೈಲಾಸದಲಿ ಪಡೆವರಲ್ತೆ.

೫೯

ಅಲ್ಲಿ ಶರಭಗಳಿರವೆ ಮೂರಸರಿಯುವ ನಿನ್ನ
ನೋಡಿ ಮದಗಜವೆಂದು ಭ್ರಮಿಸಿಬಂದು
ತಮ್ಮಂಗವನು ತಾವೆ ಭಂಗಗೊಳಿಸುವ ತೆರದಿ
ಕೋಪದಿಂದುರವಣಿಸಿ ಬೀಳುವಂದು
ಒಡನೆ ನೀಂ ತುಮುಲತರದಾಲಿಕಲ್ಮಳೆಗರೆದು
ಚದುರಿಸಾ ಶರಭಗಳ ಮೂರವೆಸೆಗೆ
ನಿಷ್ಫಲಾರಂಭಗಳಲುದ್ಯುಕ್ತನಾದವನು
ಪರಿಭವಕೆ ತಾನೆ ಗುರಿಯಾಗದಿರನೆ !

೬೦

ಸುಳಿವೆಳೆಯ ಗಾಳಿಯಲಿ ನಳನಳಿಸಿ ಬೆಳೆದಿರುವ
ವೇಣುವನವಿನಿದಾಗಿ ದನಿಗೈಯಲು
ಆ ದನಿಯನನುಸರಿಸಿ ಕಿನ್ನರಿಯರೊಲವಿನಿಂ
ತ್ರಿಪುರ ಜಯಗೀತೆಯನು ಹಾಡುತಿರಲು
ನಿನ್ನ ಮಧುರ ಧ್ವನಿಗಳಲ್ಲಿ ಕಂದರಗಳಲಿ
ಮುರಜದೊಲು ಮೃದುವಾಗಿ ಮೊಳಗುತಿರಲು
ಪಶುಪತಿಯ ನರ್ತನದ ಸಂಗೀತ ಸಾಧನಗ-
ಳೆಂದು ತಾಂ ಸಂಪೂರ್ಣಮೆನಿಸದಿಹವೆ !

೬೧

ಹಿಮಗಿರಿಯ ಸಾನುವಿನ ಸುಂದರ ನಿವೇಶಗಳ-
ನೀಕ್ಷಿಸುತೆ ನಲಿದು ನೀಂ ಮುಂದೆ ನಡೆದು
ಪರಶುರಾಮನ ಯಶವನಿಳೆಗೆ ಸಾರುತಲಿರುವ
ಹಂಸಂಗಳೊಳಪುಗುವ ಕ್ರೌಂಚ ಬಿಲದಿ
ಬಲಿಯ ನಿಯಮನಕೆಂದು ಜತನಗೈದಾ ಹರಿಯ
ಶ್ಯಾಮ ಚರಣನ್ಯಾಸವೆಂಬ ತೆರದಿ
ನಿನ್ನೊಡಲ ನಿಡಿದೆನಿಸಿ ತಿರುಗಿ ಅದರೊಳು ನುಸಿದು
ಉತ್ತರದ ದೆಸೆಗೆಂದು ತೆರಳು ಮುಂದೆ.

೬೨

ದಶಮುಖನ ಭುಜಬಲದ ಬಿಗಿದ ತೆಕ್ಕೆಯ ಭರಕೆ
ಜಗುಳಿ ಕಿಕ್ಕಿರಿದ ಗಿರಿ ಸಾನುವಿರುವ
ತ್ರಿದಶವನಿತಾಜನದ ದರ್ಪಣದ ತೆರನಿರುವ
ಕೈಲಾಸ ಪರ್ವತದ ಅತಿಥಿಯಾಗು
ಕುಮುದದೊಲು ಬಿಸುಪಾದ ತುಂಗಶಿಖರಗಳಿರುವ
ಆಗಸವನಡೆದಿರುವ ಕೈಲಾಸವು
ದಿನದಿನವು ರಾಶಿಗೈದೀಶ್ವರನ ಸಿತಹಾಸ
ವೆಂಬತೆರನೆಸೆದು ಕಣ್ಗೊಳಿಸುತಿಹುದು.

೬೩

ಅದೆ ತಾನೆ ಕಡಿದಿರುವ ಗಜದಂತದಂದದಲಿ
ಅಚ್ಚ ಬೆಳ್ಪಿನೊಳೆಸೆವ ಧವಳಗಿರಿಯ
ನುಣ್ಣನರೆದಂಜನದ ತೆರದೆ ಕರಿದಾಗಿರುವ
ನೀನದರ ಸಾನುವನು ಸೇರಿದಂದು
ಗೌರಾಂಗನೆಂದೆನಿಸಿ ಶೋಭಿಸುವ ಹಲಧರನ
ಹೆಗಲಮೇಲೆಸೆದ ಕರಿವಸನದಂತೆ
ಎವೆಯಲುಗದಂದದಲಿ ನಿನ್ನನವಲೋಕಿಸುವ
ಬೆಡಗಿನೊಂದಂದವನು ತಳೆವೆಯಲ್ತೆ!

೬೪

ಗೌರಿ ಹೆದರುವಳೆಂದೆ ಭುಜಗವಲಯವನುಳಿದು
ಶಂಭು ಕೈಹಿಡಿದವಳ ನಡಸುವಂದು
ಕ್ರೀಡೆಗೆಂದಣಿಗೈದ ಕೈಲಾಸದೆಡೆಗಳಲಿ
ಪಾದಚಾರಿಣಿಯಾಗಿ ವಿಹರಿಸುತಿರೆ
ನೀನವರ ಮುಂಮೋಡಿ ಜಲಕಣಗಳೆಲ್ಲವನು
ಘನಿಸಿರಿಸಿ ಮೆಟ್ಟಲುಗಳಿರವ ಪ್ರೋಲ್ತು
ರೂಪಾಂತರಂ ಪಡೆದು ವಿರಚಿಸೈ ದೇವಿಯರ
ಮಣಿತಟಾರೋಹಣಕೆ ಸೋಪಾನಮಂ.

೬೫

ದೇವವನಿತೆಯರಲ್ಲಿ ಕನಕವಲಯಗಳಿಂದ-
ಲಿರಿಯುತಿರೆ ಜಲಧಾರೆ ಚಿಮ್ಮಿ ಸುರಿಯೆ
ಯಂತ್ರಧಾರಾಗೃಹದ ತೆರಮೊಳಂದವರಂತು
ನಿನ್ನ ರೂಪಾಂತರಿಸಿ ನಲಿಮು ಮಿಂದು
ಬಿಸಿಲ ಬೇಗೆಯ ಬವಣೆಗೊದಗಿಬಂದಿಹ ನಿನ್ನ-
ನಲ್ಲಿಂದ ತೆರಳಲಿರೆ ತಡೆಯುವಂದು
ಕೇಳೀನಿಮಗ್ನೆಯರನವರ ನೀಂ ಭಯಗೊಳಿಸು
ಕರ್ಣಕರ್ಕಶಮಾದ ಮೊಳಗನಿರಿಮು !

೬೬

ಕನಕ ಕಮಲಗಳೊಗೆವ ಮಾನಸ ಸರೋವರದ
ನೀರು ಮೊಗೆದಾಯುಸವ ಕಳೆದು ಜಲದ !
ಆ ವೇಳೆಗಲ್ಲಿರುವ ಇಂದ್ರನೈರಾವತವ
ನೆಳಲಗೌಸಣಿಗೆಯಲಿ ಸಂಸೇವಿಸಿ
ಮುಂದೆ ಕಲ್ಪದ್ರುಮದ ಕಿಸಲಯಾಂಶುಕಗಳನು
ನಿನ್ನ ಗಾಳಿಯ ಬೀಸಿ ಚಲಿಸಿ ನಲಿಸಿ
ಇಂತು ನಾನಾ ತೆರನ ಲಲಿತ ಚೇಷ್ಟೆಗಳಿಂದ-
ಲಾ ನಗೇಂದ್ರನೊಳಲ್ಲಿ ನೆಲಸಿ ಸುಖಿಸು.

೬೭

ಪ್ರಿಯತಮನ ತೊಡೆಯಂತೆ ಕೈಲಾಸಸಾನುವಿರೆ
ಹರಿವ ಗಂಗೆಯೆ ಜಗುಳಿಮುಡೆಯಾಗಿರೆ
ಅಲ್ಲಿ ಅಲಕೆಯ ನೋಡಿ ಕಾಮಚಾರಿಯೆ ಸಖನೆ
ಅದನು ಕಾಮಿಸಿಯೆಂದು ಭಾವಿಸದಿರೆ !
ತುಂಗ ಸೌಧಗಳಿರುವ ಅಲಕೆ ಕಂಗೊಳಿಸುವುದು
ನೀರ ಸುರಿಸುವ ಮುಗಿಲ ಧರಿಸಿದಂದು
ಹೊಳೆವ ಮುಂಗುರುಳಿನಲಿ ಮುತ್ತುಗಳ ಹಾರವನು
ತಳೆದು ಕಂಗೊಳಿಸುತಿರುವಿನಿಯಳಂತೆ !

# ಉತ್ತರ ಮೇಘ

೧

ವಿದ್ಯುತ್ತಿನಂತೆಸೆವ ಲಲಿತವನಿತೆಯರಿಂದೆ
ಇಂದ್ರಚಾಪದ ತೆರದ ಚಿತ್ರದಿಂದೆ
ಸ್ನಿಗ್ಧಗಂಭೀರತಾಘೋಷದಂದದಿ ಮೊರೆವ
ನೃತ್ಯಗೀತಕೆ ನುಡಿವ ಮುರಜದಿಂದೆ
ನೀರ್ಮುಗಿಲ ತೆರನಿರುವ ಮಣಿವಿಮಾನಗಳಿಂದೆ
ಅಭ್ರಚುಂಬಿಗಳಾದ ಶಿಖರದಿಂದೆ
ಸಹಧರ್ಮಗುಣಗಳಿಂದಂತಂತೆ ನಿನ್ನ ತಾಂ
ಪೋಲ್ವ ಪ್ರಾಸಾದಂಗಳಿರುವುವಿಲ್ಲಿ.

೨

ಬಾಲಕುಂದದ ಸರವ ಮುಂಗುರುಳಿನಲಿ ಮುಡಿದು
ಲೀಲೆಗೆನೆ ಕಮಲವನು ಕರವೆ ಪಿಡಿದು
ಲೋಧ್ರದೆಸಳಿನ ರಜದ ಲೇಪನವ ಹೊಗರೆಸೆವ
ಪಾಂಡುವರ್ಣಶ್ರೀಯ ಮೊಗಮೊಳಾಂತು
ಸುಂದರ ಶಿರೀಷವನು ಧರಿಸಿ ಕರ್ಣಂಗಳಲಿ
ಕುರವಕದ ಹೊಸಹೂವ ಜಡೆಯೊಳಿರಿಸಿ
ನಿನ್ನ ಆಗಮನದಿಂದರಳಿದೆಳೆ ನೀಪಗಳ
ಬೈತಲೆಯೊಳಿರಿಸಿರುವ ವಧುಗಳಿಹರು.

೩

ಆವಗಂ ಮದವೇರಿ ಮೊರೆಯುತಿಹ ದುಂಬಿಗಳಿ
ನಾವಗಂ ಹೂಬಿಡುವ ತರುಗಳಿಂದೆ
ಆವಗಂ ಅರಸಂಚೆ ವಿರಚಿಸುವ ಕಾಂಚಿಯಿಂ
ದಾವಗಂ ಪದ್ಮನಳಿನಂಗಳಿಂದೆ
ಆವಗಂ ಪೊಳೆಯುತಿಹ ಗರಿಗೆದರಿ ಕೊರಲೆತ್ತಿ
ಕೂಗುತಿಹ ಗೃಹಮಯೂರಂಗಳಿಂದೆ
ಆವಗಂ ಕತ್ತಲೆಯನೋಡಿಸುವ ಬೆಳುದಿಂಗ
ಳಿರುಳಿನಿಂ ರಮ್ಯವೆನಿಸಿಪ್ಪುದಲಕೆ.

೪

ಆನಂದದಿಂದಲ್ಲದನ್ಯಕಾರಣಗಳಿಗೆ
ಕಣ್ಣೀರು ಕರೆಯರಾ ಯಕ್ಷಜನರು.
ವಿಪ್ರಯೋಗದ ದುಃಖವಿರದು ವಿಶ್ರೇಷರಿಗೆ
ಪ್ರಣಯಕಲಹವನುಳಿದು ಬೇರೆ ಕತದಿ.
ಇಷ್ಟಸಂಯೋಗದೊಳೆ ಪರಿಹರಿಸಬಹುದಾದ
ಕುಸುಮಶರ ಸಂಜನಿತ ತಾಪವುಂಟು
ಅನ್ಯತಾಪಗಳಿಂದೆ ಪರಿತಪಿಸರವರಲ್ಲಿ
ಯೌವನವನೊಂದನುಳಿದನ್ಯದಶೆಯಿಲ್ಲ.

೫

ತಾರೆಗಳ ಪಡಿನೆಳಲ ಕುಸುಮರಚಿತಗಳೆನಿಸಿ
ಮೆರೆವ ಸಿತಮಣಿಮಯದ ಹರ್ಮ್ಯಗಳಲಿ
ಉತ್ತಮ ಸ್ತ್ರೀಜನರ ಸಹವಾಸ ಸೌಖ್ಯದಲಿ
ಯಕ್ಷರಾನಂದದಲಿ ಸೊಗವಡೆದು
ಗಂಭೀರ ಘೋಷದಲಿ ನಿನ್ನವೊಲು ದನಿಗುಡುತೆ
ಮೃದುವಾಗಿ ನುಡಿವ ಪುಷ್ಕರಗಳಿಂದೆ
ಕಲ್ಪವೃಕ್ಷಗಳಿಂದಮೊಗೆದ ರತಿಫಲವೆನುವ
ಮಧುವನಾಸ್ವಾದಿಸುವರಂದದಿಂದೆ.

೬

ಮಂದಾಕಿನೀನದಿಯ ಶೀತಳೋದಕದಿಂದೆ
ಸುಳಿವ ತಂಬೆಲರಿನಲಿ ಸೇವ್ಯರಾಗಿ
ಡಡವೆಡೆಯೆ ಬೆಳೆದಿರುವ ಮಂದಾರವೃಕ್ಷಗಳ
ನೆಳಲಿನಾಸರೆಗಳಲಿ ಬೇಗೆ ನೀಗಿ
ಕನಕಸಿಕತದ ಹುಡಿಯ ಹಿಡಿಹಿಡಿಯನೆರಚಿ ತಾ
ವವರೊಳವಿತಿರಿಸಿರುವ ಮಣಿಗಳಿಂದೆ
ಅಮರರುಮಪೇಕ್ಷಿಸುವ ಯಕ್ಷಕನ್ಯೆಯರಲ್ಲಿ
ಹುಡುಕುವಾಟವನಾಡಿ ನಲಿಯುತಿಹರು.

೭

ತೊಂಡೆಹಣ್ಣಿನ ತುಟಿಯ ಪ್ರಿಯತಮೆಯರುಟ್ಟಿರುವ
ರೇಸಿಮೆಯ ಸೀರೆಯನು ಸೆಳೆಯಲೆಂದು
ನೀವಿಯನು ಸಡಲಿಸುತೆ ರಾಗದಿಂ ಪ್ರಿಯರದನು
ಕಂಪಿಸುವ ಕೈಗಳಿಂದೆಳೆಯುವಂದು
ತುಂಗಕಿರಣವನೆಸೆದು ತಮ್ಮಮುರೆ ತೊಳಗುತಿಹ
ರತ್ನಮಣಿದೀಪಗಳ ಕಿಡಿಸಲೆಂದು
ಹೇವದಿಂದಂಗನೆಯರೆರಚುತಿರೆ ಕುಂಕುಮವ
ವಿಫಲವಾಗುವುವವರ ಹಿಡಿಯ ಹುಡಿಯು.

೮

ಮೋಡಗಳ ತಡೆಹರಿದ ನಟ್ಟಿರುಳಿನಲಕೆಯಲಿ
ತೊಳಗುತಿಹ ಚಂದಿರನ ಕಿರಣದಿಂದೆ
ತಂತುಜಾಲಮೊಳಿರುವ ಶಶಿಕಾಂತಮಣಿಮಾಲೆ
ಮಿಗಿಲು ಹನಿಹನಿಗರೆದು ಕರಗುತಿಳಿಮು
ತಮ್ಮನೊಲಿದಪ್ಪಿರುವ ಪ್ರಿಯತಮರ ತೋಳುಗಳ
ಜಗುಳಿದಾಲಿಂಗನಮೊಳೊರಗಿವಂಥ
ಅಲಕೆಯ ವಧೂಜನರ ರತಿಕೇಳಿಯಿಂಮೊಗೆದ
ದೇಹದಾಯಾಸವನು ನೀಗುತಿಹುದು.

೯

ನಿನ್ನಂಥ ಮುಗಿಲುಗಳ ಮರುತನೋಡಿಸಿ ತಂದು
ಅಲಕೆಯುಪ್ಪರಿಗೆಯೊಳು ತೂರಿವಂದು
ಹರ್ಮ್ಯಾಗ್ರಭೂಮಿಗಳ ಚಿತ್ರಶಾಲೇಖಗಳ
ಜಲಕಣಗಳಿಂದಳಿಸಿ ದೋಷಗೆನಿಸಿ
ಶಂಕೆತಟ್ಟಿದವೋಲು ಒಡನೆ ಅಲ್ಲಿಂದಿರದೆ
ಹೊಗೆ ಹೊರಗೆ ಹೊರಡುವುದನನುಕರಿಸುತೆ
ಅದನೊಳತಿ ನಿಪುಣನೆನೆ ನುಸುಳುವುವು ಮರೆಯಾಗಿ
ಜಾಲಂಧ್ರದಿಂದೆ ಘುರ್ಘುರಿತಮಾಗಿ.

೧೦

ಒಳಮನೆಯೊಳವಿತ್ತಿರಿಸಿದಕ್ಷಯ್ಯನಿಧಿಗಳಿರೆ
ವಿಬುಧವನಿತೆಯರಾಗಿ ಹೆಸರುಗಳಿಸಿ
ಮೆರೆವ ಗಣಿಕಾಜನರ ಬಹುತೆರದ ಸರಸಗಳ
ಸಹವಾಸ ಸುಖಗಳಲಿ ಮುದಿತರೆನಿಸಿ
ಧನಪತಿಯ ಕೀರ್ತಿಯನು ಮೇಲ್ದನಿಯೊಳುಲಿಯುತಿಹ
ಸವಿಗೊರಲ ಕಿನ್ನರರ ಮೇಳದೊಡನೆ
ವಿಭ್ರಾಜವೆನುವ ಬಹಿರುದ್ಯಾನವನವನನುಭವಿಸು
ತನುದಿನವು ಸುಖಿಸರಾ ಕಾಮಿ ಜನರು.

೧೧

ಅಲಕದಿಂದುದುರಿರುವ ಮಂದಾರದರಳಿಂದೆ
ಮಕರಿಕಾಪತ್ರಗಳ ದಳಗಳಿಂದೆ
ಕಿವಿಗಳಿಂ ಜಗುಳಿರುವ ಕನಕ ಕಮಲಗಳಿಂದೆ
ಕಾಮಿನಿಯರಾತುರದೆ ನಡೆಯುವಂದು
ಕೊರಳ ಹಾರವು ಹರಿದು ದಾರದಿಂದುದುರಿರುವ
ಮುತ್ತುಗಳ ಸರದಿಂದೆ ಮಣಿಗಳಿಂದೆ
ನಿಶಿಯೊಳಭಿಸಾರಿಕೆಯರೊಲಿದು ಸುಳಿದಾ ದಾರಿ
ನೇಸರುದಯದೊಳಿರದೆ ಕಣ್ಗೆಸೆವುದು.

೧೨

ಅಲ್ಲಿ ಸಾಕ್ಷಾತ್ತಾಗಿ ಧನಪತಿಯ ಸಖನಾದ
ಮಹದೇವ ನೆಲಸಿರುವನೆಂದು ತಿಳಿದು
ಷಟ್ಪದವೆ ಮೌರ್ವಿಯೆನಲೆಸೆವ ಕೋದಂಡವನು
ಮನ್ಮಥನು ಭಯದಿಂದೆ ಧರಿಸನೆಂದುಂ.
ಕಾಮುಕರ ಗುರಿಮಾಡಿ ತಪ್ಪದವರನು ಸೆಳೆವ
ಹುಬ್ಬುಗಂಟಿಕ್ಕಿರುವ ನೋಟವಿರುವ
ಚತುರ ವನಿತಾಜನರ ವಿಭ್ರಮ ವಿಲಾಸಗಳೆ
ಮನ್ಮಥಾರಂಭಗಳನೆಸಗುತಿಹವು.

೧೩

ಚಿತ್ರತರ ವಸನಗಳ ವಿಧವಿಧದ ತೊಡವುಗಳ
ಪುಷ್ಪಗಳ ಪತ್ರಗಳ ಕಿಸಲಯಗಳ
ವಿಭ್ರಮವನಕ್ಷಿಗಳಿಗುಪದೇಶಮಾಳ್ಪೊಂದು
ದಕ್ಷತೆಯನಾಂತಿರುವ ಮಧುರಸಗಳ
ಚರಣಕಮಲಂಗಳಿಗೆ ನ್ಯಾಸಯೋಗ್ಯಗಳಾದ
ಪೊಳೆವ ಲಾಕ್ಷಾರಸವ ಲೇಪನಗಳ
ರಮಣಿಯರಲಂಕಾರ ಸಾಧನಗಳೆಲ್ಲವನು
ಕಲ್ಪವೃಕ್ಷವದೊಂದೆ ಕೊಡುವುದಲ್ಲಿ.

೧೪

ಅಲ್ಲಿ ಧನಪತಿಯ ಗೃಹಮುತ್ತರದೊಳೆನ್ನ ಮನೆ
ದೂರದೊಳೆ ತೋರುವುದು ಕಣ್ಗೆಸೆಯುತೆ
ಸುರಪತಿಯ ಧನುವಿನಂತತಿ ಚಾರುತರವಾದ
ಮಕರತೋರಣದಿಂದೆ ಮನಸೆಳೆಯುತೆ
ಅದರುಪಾಂತದೊಳಿಹುದು ಕೃತಕತನಯನ ತೆರೆದೊ
ಳೆನ್ನ ಕಾಂತೆಯು ಮೋಹದಿಂದ ಬೆಳಸೆ
ಕೈಗೆ ನಿಲುಕುವ ತೆರದೆ ಪೂಗೊಂಚಲಿಂ ಬಾಗಿ
ನಿಂದೊಂದು ಬಾಲಮಂದಾರ ತರುವು.

೧೫

ಮರಕತದ ಶಿಲೆಗಳಲಿ ವಿರಚಿಸಿದ ಸೋಪಾನ
ಮಾರ್ಗಮಿಹ ವಾಪಿಯೊಂದಿರುವುದಲ್ಲಿ ;
ರಮಣೀಯಮೆನಲೆಸೆವ ವೈಡೂರ್ಯನಾಳಗಳ
ಕನಕ ಕಮಲಗಳಿಂದೆ ನಿಬಿಡಮಾಗಿ.
ಆ ಕೊಳದ ನೀರಿನಲಿ ನೆಲಸಿರುವ ಹಂಸಗಳು
ನಿನ್ನ ನೋಡಿಯುಮಳಲಸಿನಿಸಾನದೆ
ಸನಿಹದೊಳೆ ತೋರುವಾ ಮಾನಸವನಾಶಿಸದೆ
ಸೋತ್ಕಂಠೆಯಿಂದವನು ಸ್ಮರಿಸದಿಹವು.

೧೬

ಆ ಕೊಳದ ತೀರದೊಳೆ ಅತಿ ಮನೋಹರವಾದ
ಇಂದ್ರನೀಲದ ಮಣಿಯ ಶಿಖರವಿರುವ
ಕನಕ ಕದಳೀವನದ ವೇಷ್ಟನದೊಳೆಸೆಯುತಿಹ
ಕ್ರೀಡೆಗೆಂದಣಿಗೈದ ಶೈಲವಿಹುದು.
ಮಿಂಚಿನಂಚಿನೊಳೆಸೆದು ಮಿರುಗುತಿಹ ಹೇ ಸಖನೆ
ನಿನ್ನವೊಲೆ ತೋರುತಿಹ ಗಿರಿಯನದನು
ನನ್ನ ಗೇಹಿನಿಯೊಲಿದ ಪ್ರಿಯವಸ್ತುವೆಂದರಿತು
ಕಾತರದ ಚೇತನದೆ ಸ್ಮರಿಸುತಿಹೆನು.

೧೭

ಕುರವಕದ ಬೇಲಿಯೊಳಗಿರುವ ಮಾಧವಿಲತೆಯ
ಮಂಡಪದ ಸನಿಹವಿಹ ಮರಗಳಲ್ಲಿ
ಚಲಿಸುತಿಹ ಕಿಸಲಯಗಳೆಸೆವ ರಕ್ತಾಶೋಕೆ !
ಬಳಿಯೆ ರಾರಾಜಿಸುವ ಕೇಸರ ತರು !
ನನ್ನಂತೆ ಚೆನ್ನಸುಗೆ ಕಾತರಿಸುತಿಹುದಲ್ಲಿ
ನಿನ್ನ ಗೆಳತಿಯ ವಾಮಚರಣಕೆಳಸಿ
ದೋಹದವ್ಯಾಜದಿಂದೆನ್ನವೊಲು ಬಯಸುತಿದೆ
ಕೇಸರವು ಸತಿಯ ಮುಖಮದಿರೆಗೆಳಸಿ.

೧೮

ಅವುಗಳೆರಡರ ನಡುವೆ ಅತಿ ಕಠೋರಗಳೆನಿಸ
ದೆಳೆವಿದಿರ ತೆರನೆನಿಪ ಮಣಿಗಳಿಂದೆ
ನಿರ್ಮಿಸಿದ ಮರಕತದ ವೇದಿಕೆಯೊಳೆಸೆಯುತಿದೆ
ಸ್ಫಟಿಕ ಫಲಕದ ಕನಕ ವಾಸಯಷ್ಟಿ.
ಸುಭಗವೆನೆ ದನಿಗೈವ ಕೈಬಳೆಗಳಲುಗುತಿರೆ
ಕರದ ತಾಳಗಳಿಂದಲೆನ್ನ ಕಾಂತೆ
ನಿನಗೆ ಸಖನೆನಿಸಿರುವ ನೀಲಕಂಠನನಲ್ಲಿ
ಸಂಜೆಯಲಿ ತಾ ನಿಂದು ಕುಣಿಸುತಿಹಳು.

೧೯

ಇಂತು ನಾ ಹೇಳಿರುವ ಲಕ್ಷಣಗಳೆಲ್ಲವನು
ನಿನ್ನ ಮನದೊಳು ನೆನೆದು ಹೇ ಸಾಧುವೆ
ಬಾಗಿಲೊಳು ಬರೆದಿರುವ ಶಂಖ ಪದ್ಮಗಳಿಂದೆ
ತಿಳಿದವನು ನನ್ನ ಮನೆಯೆಂದು ಬಗೆದು
ನನ್ನ ವಿರಹದೊಳಿಂದು ಕಾಂತಿಗುಂದಿ ದವೋಲು
ಇರುವ ಮನೆಯದನೆನ್ನದೆಂದು ನೋಡು
ನೇಸರುದಯಿಸದಂದು ತಾವರೆಯ ಹೂವರಳಿ
ತನ್ನ ಕಾಂತಿಯನೆಂತು ಹೊಮ್ಮಲಹುದು !

೨೦

ಅಲ್ಲಿ ನೀನಾತುರದೊಳೊಳಮನೆಯ ಪುಗುವಂದು
ಮರಿಯಾನೆಯಂದದಲಿ ರೂಪನಾಂತು
ಮೊದಲೆ ನಾಂ ಪೇಳಿದಾ ರಮ್ಯಸಾನುಗಳಿರುವ
ಕ್ರೀಡೆಗಂದಣಿಗೈದ ಶೈಲವೇರಿ
ಖದ್ಯೋತ ಪಂಕ್ತಿಗಳ ವಿಲಸಿತಕೆ ಸಮನೆನಿಸ-
ದಲ್ಪಾಲ್ಪ ಭಾಸದಿಂ ಮಿಂಚನೆಸೆದು
ವಿದ್ಯುದುನ್ಮೇಷವೆನುವಾಲೋಕದಿಂದೆ ನೀ-
ನೊಳಮನೆಯೊಳೆಲ್ಲವನು ನೋಡಬಹುದು.

೨೧

ತೆಳುಮೆಯ್ಯಪ್ಪೊಗರುಗುವ ನಡುಹರಯವಂಗನೆ
ಸುಲಿಪಲ್ಲ ಸತಿ ಪಕ್ವಬಿಂಬಾಧರೆ
ಚಕಿತಹರಿಣಿಯ ತೆರದಿ ಚಪಲ ನೇತ್ರಾಲೋಕೆ
ನಿಮ್ನನಾಭಿಯ ಸುಂದರಿ ಕೃಶೋದರಿ
ಶ್ರೋಣೀಭರದ ಕತದೆ ಮಂದಗಾಮಿನಿಯಳಿನೆ
ಕುಚಭರದೆ ತಾನೀಷದವನತೆಯೆನೆ
ಅಲ್ಲಿರುವಳೆನ್ನ ಸತಿ ಯುವತಿಯರ ವಿಷಯದಲಿ
ಧಾತೃವಿನ ಮೊದಲನೆಯ ಸೃಷ್ಟಿಯಂತೆ.

೨೨

ಅವಳ ಸಹಚರನೆನಿಸಿದಾನಿಂತು ದೂರವಿರೆ
ಚಕ್ರವಾಕಿಯತೆರದೊಳೊಂಟಿಯಾಗಿ
ಪರಿಮಿತಾಲಾಪೆಯೆನೆ ಕೊರಗುವಬಲೆಯನವಳ
ನನ್ನ ಎರಡನೆ ಜೀವಮೆಂದು ಬಗೆಯಾ
ಗುರುವಿರಹ ಭಾರದಲಿ ಸಿಡಿದಾಗಿ ಸಾಗುವೀ
ಮಳೆಯದಿನಗಳಲಾಕೆ ಜೀರ್ಣರೂಪಿಂ
ಬಾಲೆ ಗಾಢೋತ್ಕಂಠೆ ಶಿಶಿರ ಪೀಡಿತಳಾದ
ಪದ್ಮಿನಿಯ ತೆರನಿರುವಳೆಂದರಿವೆನು.

೨೩

ಮತ್ತೆಮತ್ತಳುವಂದು ಅಳಲಿನುರುಬೇನೆಯಲಿ
ಊದಿಕೊಂಡಿರುವ ಕಣ್ಣೆವೆಗಳಿಂದೆ
ನಿಡಿದುಸಿರು ಬಿಡುವಂದು ಅದರ ಸೆಕೆಯುರಿಯಿಂದೆ
ಬಣ್ಣ ಕಳೆಗುಂದಿರುವ ತುಟಿಗಳಿಂದೆ
ಬೊಗಸೆಸ್ಯೆಗಳಲಾಂತ ಮೊಗದ ಮೇಲಿಂದಿಳಿದ
ಮುಂಗುರುಳು ಮರೆಮಲ್ಲಿ ನಸುತೋರುವ
ತನ್ನ ಇನಿಯಳ ಮೊಗವು ನಿನ್ನ ಉಪಸರಣದೊಳು
ಕಳೆಗುಂದಿದಿಂದುವೊಲು ದೀನಮಹುದು.

೨೪

ನೀನವಳ ನೋಡುವಂದಾಕೆ ತಾನೆಂತಿಹಳೊ
  ನಿನ್ನ ಕಣ್ಣಿಗೆ ರಮಣಿ ಬೀಳ್ವಳೆಂತೊ!
ಬಲಿಪೂಜೆಗಳಲಿ ತಾನಾಸಕ್ತಳಾಗಿಹಳೊ
  ನೇಮದಲಿ ಹರಕೆಗಳ ಸಲಿಸುತಿಹಳೊ!
ವಿರಹದೊಳು ಕೃಶವಾದ ನನ್ನ ಸಾದೃಶ್ಯವನು
  ಭಾವಗೋಚರಮಾಗೆ ಬರೆಯುತಿಹಳೊ!
ಮಧುರವಚನವ ನುಡಿವ ಪಂಜರದ ಶಾರಿಕೆಯ
  ಪತಿಯ ನೆನೆವೆಯ ಎಂದು ನುಡಿಸುತಿಹಳೊ!

೨೫

ಮಡದಿ ವೀಣೆಯ ಪಿಡಿದು ಮಲಿನವಸನಮನಾಂತ
  ತೊಡೆಯ ಮೇಲದನಿರಿಸಿ ನೇವರಿಸುತೆ
ನನ್ನ ಹೆಸರಿರುವಂತೆ ಪದಗಳನು ಜೋಡಿಸಿದ
  ಗೀತೆಯೊಂದನು ನೆನೆದು ಹಾಡಲೆಳಸಿ
ಸುರಿವ ಕಣ್ಣೀರಿನಲಿ ನಾಂದ ತಂತಿಗಳ ತಾ-
  ನೆಂತೆಂತೊ ಶ್ರುತಿಗೊಳಿಸಿ ಮತ್ತೆ ಮಿಡಿದು
ತಾನೆ ವಿರಚಿಸಿದ ಪದವಾವರುಂ ಸಲಸಲಕೆ
  ಮೂರ್ಛನೆಯ ಮರೆವವಳ ನೋಡಲಿರುವೆ.

೨೬

ವಿರಹಕಾಲಾವಧಿಯೊಳಿನ್ನುಳಿದುವೆನಿತೆಂದು
  ತಿಂಗಳುಗಳೊಂದೊಂದನೆಣಿಸಲೆಂದು
ಹೊಸಿಲ ಮೇಲಿರಿಸಿರುವ ಹೂವುಗಳನೊಂದೊಂದ-
  ನಾಯ್ದೆಣಿಸಿ ನೆಲದ ಮೇಲಿಡುತಿರುವಳೊ!
ಮನಸಿನೊಂಮೂಹೆಯಲಿ ಮದನಲೀಲೆಯ ನೆನೆದು
  ಸಂಭೋಗಸುಖವನನುಭವಿಸುತಿಹಳೊ!
ರಮಣರಗಲಿರುವಂದು ರಮಣಿಯರಿಗೀ ಬಗೆಯ
  ಲೀಲೆಗಳೆ ಮೋದನೋಪಾಯಮತ್ತೆ!

೨೭

ನಿನ್ನ ಸಖನರಸಿ ತಾನೀ ತೆರನೊಳಿರುವೆಂದು
ವಿರಹ ಪೀಡಿಸದವಳ ಹಗಲಿನಲ್ಲಿ
ಆದುವೆ ರಾತ್ರಿಯ ವೇಳೆ ನಿರ್ವಿನೋದೆಯನವಳ
ಗುರುವಿರಹಭಾರೆಯೆನೆ ಶಂಕಿಸುವೆನು
ನಡುವಿರುಳಿನೊಳು ನೊಂದು ನಿದ್ರೆ ಬಾರದೆ ಹೊರಳಲು
ವವನಿಶಯನೆಯ ಸತಿಯನಾ ಸಾಧ್ವಿಯ
ನನ್ನ ಸಂದೇಶವನು ನುಡಿದು ಸಲೆ ಸುಖಗೊಳಿಸೆ
ಸದ್ಮವಾತಾಯನದೊಳಿದ್ದು ನೋಡು.

೨೮

ಮನದುರಿಗೆ ಮೈ ಸೊರಗಿ ವಿರಹಶಯನದೊಳೊರಗಿ
ಬಸವಳಿದು ಬೆಂಡಾಗಿ ಒಸ್ಕುಗ್ಗಲಾಗಿ
ಮೂಡಲಿನ ಮೂಲದಲಿ ಒಂದೆ ಕಳೆಯುಳಿದಿರುವ
ತಂಗದಿರನಂದದಲಿ ದೀನಳಾಗಿ
ನನ್ನೊಡನೆ ಮನತುಂಬಿ ರತಿಸುಖವನನುಭವಿಸಿ
ಕ್ಷಣದವೊಲು ಕಳೆದಂಥ ರಾತ್ರಿಯವನು
ವಿರಹದಿಂದತಿ ದೀರ್ಘಮಾಯಿತೆನೆ ಭಾವಿಸುತೆ
ಬಿಸಿಯ ಕಣ್ಣೀರಿನಲಿ ಕಳೆಯುತಿಹಳು.

೨೯

ಜಾಲಮಾರ್ಗದಿನಿಳಿವ ಅಮೃತಶೀತಲಮೆನಿಸಿ
ದಿಂದುವಿನ ಕಿರಣಗಳನೆಂದಿನವೊಲೆ
ಆನಂದವಹುದೆಂದು ಅರ್ತಿಯಿಂದೀಕ್ಷಿಸುತೆ
ಒಡನೆ ಕಡುಖೇದದಿಂ ಕಣ್ಣೆರಹುತೆ
ಕಂಬನಿಯ ಭಾರದಲಿ ತೊಯ್ದು ಎವೆಗಳ ಮುಚ್ಚಿ
ಮೋಡವಾವರಿಸಿರುವ ಮಳೆಯ ದಿನದ
ತೆರೆದು ತೆರೆಯದವೋಲು ತೋರ್ಪ ನೆಲದಾವರೆಯ
ತೆರನಿರುವ ಸತಿಯ ನೀಂ ನೋಡಲಿರುವೆ.

೩೦

ಬರಿನೀರ ಮೀಹದಿಂದತಿ ಪರುಷವಾಗಿರುವ
ಮುಂಗುರುಳು, ಕೆನ್ನೆವರವಿಳಿದು ಬರಲು
ಅಧರ ಕಿಸಲಯಗಳನು ಮಲಿನಗೊಳಿಸುತಲಿರುವ
ಬಿಸಿಯುಸಿರಿನಿಂದಲವನೋಸರಿಸುತೆ
ಸುರಿವ ಕಣ್ಣೀರಿನಲಿ ನಿದ್ರಾವಕಾಶವಿನಿ
ಸಿಲ್ಲವೆಂದರಿತರೂ ಅದನೆ ಬಯಸಿ
ಕನಸಿನೊಳಗಾದರೂ ನನ್ನ ಸಂದರ್ಶನವ
ಪಡೆವುದೆಂತೆಂದವಳು ಚಿಂತಿಸುವಳು.

೩೧

ವಿರಹದಿವಸದ ಮೊದಲೆ ಆಕೆ ಹಾರವನುಳಿದು
ಆವ ಹೆರಳನು ತೆಗೆದು ಶಿಖೆಗೈದಳೊ
ಶಾಪ ಕೊನೆಗೊಂಡಂದು ಶೋಕವಿಗಳಿತನಾಗಿ
ಆವ ಶಿಖೆಯನು ನಾನು ಬಿಡಿಸಲಿಹೆನೊ
ಸಿಕ್ಕಾಗಿ ಜಡೆಗಟ್ಟಿ ಸೋಂಕಿದರೆ ಬಿರುಸಾಗಿ
ಜಗುಳಿ ಕದಪಿನ ಮೇಲೆ ಕವಿಯುತಿರುವ
ಏಕವೇಣಿಯನದನು ಅಯಮಿತನಖಂಗಳಿಂ-
ದೆಳೆದೆಳೆದು ತೆಗೆವವಳ ನೋಡಲಿರುವೆ.

೩೨

ಅಬಲೆ ಮನದಳಲಿನಿಂಮೊಡವೆಗಳನೆಲ್ಲವನು
ಕಳಚಿಟ್ಟು ಕೃಶಳಾಗಿ ಬಳಲಿ ಬೆಂದು
ವಿರಹಶಯ್ಯೆಯ ಮೇಲೆ ಸಲಸಲಕೆ ಹೊರಳುವಳ
ಕೋಮಲಾಂಗಿಯನಿರದೆ ನೋಡಿದಂದು
ನೀನುಮಾಕೆಯ ಇರವಿಗವೆಗರಗಿ ಹೊಸಮಳೆಯ
ರೂಪದಲಿ ಕಣ್ಣೀರು ಕರೆಯಲಿರುವೆ
ಆರ್ದ್ರಾಂತರಾತ್ಮರೆಂದೆನಿಸಿರುವ ಸರ್ವರೂ
ಕಾರುಣ್ಯ ವೃತ್ತಿಯನು ತೋರ್ಪರಲ್ತೆ.

೩೩

ನಿನ್ನ ಗೆಳತಿಯ ಮನವು ಕಟ್ಟೊಲ್ಮೆಯಿರಕದಿಂ-
ವೆನ್ನೊಳನುರಕ್ತವೆಂದರಿತಿರುವೆನು.
ಅದರಿಂವಲಿಂದಾನು ಇದೆ ಮೊದಲ ವಿರಹದೊಳು
ಅವಳನಿಂತಿರುವಳೆಂದೂಹಿಸಿಹೆನು.
ಸುಭಗನಾನೆಂದೆನುವ ಬರಿಹೆಮ್ಮೆಯಿಂದೇನು
ಮಾತಾಳಿಯಂದದಲಿ ಬಣ್ಣಿಸಿದೆನೆ!
ಸೋದರನೆ ನಾನಿಂದು ಪೇಳಿರುವುದೆಲ್ಲಮುಂ
ಶೀಘ್ರಮೊಳೆ ನಿನಗೆ ಪ್ರತ್ಯಕ್ಷಮಹುದು.

೩೪

ಮೊಗದ ಮೇಲಿಂದಿಳಿದು ಮುಂಗುರುಳು ಕವಿಯುತಿರೆ
ಕಡೆನೋಟ ಪಸರಿಸದ ಮುಸುಕಾಗಿರೆ
ಮಧುವ ಸೇವಿಸದಿರಲು ಭ್ರೂವಿಲಾಸಗಳಿರದೆ
ಕಾಡಿಗೆಯ ಸುಣ್ಣಾಳಿಯು ಕಳೆಗುಂದಿರೆ
ನೀನು ಬಳಿಗೈದುವರೆ ಹಾರಿ ನಸುಚಲಿಸುತಿರೆ
ಆ ಮೃಗಾಕ್ಷಿಯ ವಾಮನಯನವದನು
ಮೀನ ಚಾಲನವಡೆದ ಕುವಲಯಶ್ರೀಯೊಂದು
ಸಾಮ್ಯವನು ಪಡೆಯುದೆಂದೂಹಿಸುವೆನು.

೩೫

ವಿಧಿವಶದೊಳಿಂದವನಗಲಿ ನಾಂ ದೂರವಿರೆ
ನನ್ನ ಬೆರಳುಗುರುಗಳ ಕಲೆಗಳಳಿಸಿ
ಚಿರಕಾಲದಿಂದಾಕ ತಳೆದ ಮಣಿಹಾರವನು
ದೈವಗತಿಯಿಂದದನುಮಂತೆ ತ್ಯಜಿಸಿ
ಕೂಟದಾಯಾಸವನು ಪರಿಹರಿಸಲೆಂದಾನು
ಕೈಗಳಿಂದೊತ್ತುವುದಕರ್ಹವೆನಿಸಿ
ಬೆಳೆದ ಬಾಳೆಯ ದಿಂಡಿನಂತೆ ಬೆಳ್ಪಿನೊಳೆಸೆವ
ನನ್ನವಳ ವಾಮೋರು ನಸುಚಲಿಪುದು.

೩೬

ಜಲದ ಹೇಳುವೆ ಕೇಳು ನೀನು ಹೋಗುವ ವೇಳೆ
ಮಲಗಿ ಜೊಂಪಿನೊಳಿರಲು ನನ್ನ ಸತಿಯು
ನನಿಹದೊಳೆ ಕುಳ್ಳಿರ್ದು ನೀನವಳನನುಸರಿಸಿ
ಯಾಮಮಾತ್ರಂ ಸಹಿಸು ಮೊಳಗನುಳಿದು.
ತನ್ನ ಕನಸಿನೊಳಿರವೆ ಮನದಾಣ್ಮನೆನ್ನನೆಂ-
ತೋ ಪಡೆದು ಬಿಗಿದಪ್ಪಿ ನಲಿಯುತಿರಲು
ನನ್ನ ಕೊರಳನು ಸುತ್ತಿ ಬಿಗಿದ ಅವಳಪ್ಪುಗೆಯ
ಬಳ್ಳಿದೋಳಿನ ತೆಕ್ಕೆ ಜಾರದಿರಲಿ.

೩೭

ಹೊಚ್ಚಹೊಸ ಮಾಲತಿಯ ಬಿರಿಮುಗುಳಿನೊಡನೊಡನೆ
ತಾನುಮಂತಸ್ತಾಪಶಮನೆಯಾಗೆ
ನಿನ್ನ ನೀರಿನ ಹನಿಯ ತಂಪೇರಿದೆಲರಿನಿಂ
ಮೃದುವಾಗಿ ಸುಳಿದವಳನೆಚ್ಚರಿಸಲು
ಸದ್ಮವಾತಾಯನದೆ ನಿಶ್ಚಲಾಕ್ಷಿಯನಿರಿಸಿ
ನೋಳ್ಪ ಮಾನಿನಿಯವಳ ನುಡಿನಲೆಳಸಿ
ಮಿಂಚವೆಯೆ ಮುನ್ನಿಂತು ಧೈರ್ಯವಲಿ ನೀನಿಂತು
ಮೊಳಗುಗಳ ಮಾತುಗಳನಾರಂಭಿಸು.

೩೮

ಭರ್ತೃವಿನ ಮಿತ್ರನುಂ ಪ್ರಿಯನುಮಾವಂಬುವಾ-
ಹನನೆಂದು ತಿಳಿಯೆನ್ನ ಮುತ್ತೈದೆಯೆ !
ಅವನ ಸಂದೇಶವನು ನನ್ನ ಮನದೊಳಗಿರಿಸಿ
ಬಳಿಗೆ ಬಂದಿರುವೆನೆಂದೆನ್ನನರಿಯಾ !
ಅಬಲೆಯರ ಜಡೆಮುಡಿಯ ಬಿಡಿಸಲಾತುರರಾಗಿ
ದಾರಿಯಲಿ ತೊಳಲುವಾ ವಿರಹಿಗಳನು
ಮೃದುಮಧುರವಾಗಿರುವ ಮೊಳಗುಗಳ ಘೋಷದಿಂ-
ದಿರದೆ ತ್ವರೆಗೊಳಿಸುವಾ ಮುಗಿಲೆ ನಾನು.

೩೯

ಇಂತು ನೀನುಸುರುತಿರೆ ಪವನತನಯನ ಕಂಡ
ಮೈಥಿಲಿಯು ಪ್ರೇಮಾಕೆ ಮೊಗವನೆತ್ತಿ
ಉತ್ಕಂಠವಶದಿಂದಲುಚ್ಛ್ವಸಿತ ಹೃದಯಳೆನೆ
ನಿನ್ನ ವೀಕ್ಷಿಸಿ ಸೊಗದೆ ಸಂಭಾವಿಸಿ
ಏಕೈಕಭಾವದಲಿ ಕೇಳುವಳದೆಲ್ಲವನು
ಪತಿಯ ನೇಹಿಗನೆಂದು ಸಂಭಾವಿಸಿ.
ಸ್ನೇಹಿತರು ತಿಳಿಸುವಾ ಪತಿಯ ಕುಶಲದ ವಾರ್ತೆ
ಸಂಗಮದ ಸುಖಕಿಂತ ಕಿಂಚಿದೂನಂ.

೪೦

ನನ್ನ ವಚನವ ನಲಿಸಿ ನೀನುಪಕೃತನೆನಿಸೆ
ಆಕೆಯೊಡನಿಂತುಸಿರು ದೀರ್ಘಾಯುವೆ !
ಅಬಲೆ ನಿನ್ನಿಂದಗಲಿದನಲಿಸುರು ಜೀವಿಯುಳ
ರಾಮಗಿರ್ಯಾಶ್ರಮಂಗಳಲಿ ನೆಲಸಿ
ಉಸಿರು ಹಿಡಿದುಳಿದಿರುವ ನಿನ್ನ ಸಹಚರನಿಂದು
ಕುಶಲವೇ ನಿನಗೆಂದು ಕೇಳುತಿಹನು.
ಸುಲಭಮೊದಗೇನಂಥ ಜೀವಿಗಳ ಬೆಸಗೊಳ್ಳು-
ದೀ ಬಗೆಯ ಮುನ್ನುಡಿಯು ಉಚಿತಮಲ್ತೆ !

೪೧

ತನ್ನ ಮಾರ್ಗವ ತಡೆದು ತನಗೆ ವೈರಿಯಾಗಿರುವ
ವಿಧಿವಶದೆ ದೂರದಿಹ ನಿನ್ನ ಪತಿಯು
ತೆಳುವಾಗಿ, ಕಡುತಾಪದಲಿ ಬೆಂದು, ನಿಡಿದುಸಿರು
ಬಿಡುತೆ, ಕಣ್ಣೀರಿನಲಿ ನಾಂದು ನೊಂದು ;
ಬಿಸಿಯುಸಿರು ಬಿಡುತಿರುವ ಸಂತಾಪಗೊಳುತಿರುವ
ಕಡುನೊಂದು ಕಂಬನಿಯ ಕರೆಯುತಿರುವ
ಬಡವಾಗಿ ಸೊರಗಿರುವ ನಿನ್ನಂಗ ಸಂಗವನು
ತನ್ನ ಮನವೆಣಿಕೆಯೊಳೆ ಪೊಂದುತಿಹನು.

೪೨

ನೆರೆದ ಸಖಿಯರ ಇದಿರೊಳಿರುವ ನಿನ್ನನು ನೋಡಿ
ಮೊಗಕೆ ಮುತ್ತಿಡುಪ್ರೊಂದು ಆಸೆಯಿಂದೆ
ಎಲ್ಲರುಂ ಕೇಳ್ವಂತೆ ಪೇಳ್ವ ಮಾತಾವರುಂ
ಕಿವಿಯೊಳುಸುರಲು ಬಯಸಿದಂಥ ಪತಿಯು
ಶ್ರವಣವಿಷಯವ ಮೀರಿ ಲೋಚನಾತೀತನೆನೆ
ದೂರದೇಶದೊಳಿಂದು ನಿಂತನೆಂದೆ
ನಿನ್ನೊಂದು ಮಮತೆಯಲಿ ಹೆಣೆದು ಸೇರಿಸಿದಂಥ
ಪದವಿದನು ಪೇಳ್ದನಿಂತೆನ್ನ ಮುಖವೆ.

೪೩

ಶ್ಯಾಮಾಲತಾವಳಿಯೊಳಂಗಮೊಂದಂದವನು
ಮೊಗದೊಂದು ಕಾಂತಿಯನು ಚಂದಿರನೊಳು
ಚಕಿತವನಹರಿಣಿಯಾಲೋಕನದೆ ನೋಟವನು
ತೆಳ್ವೊಳೆಯ ಅಲೆಗಳಲಿ ಹುಬ್ಬಿನೊಲವ
ಶಿಖಿಕಲಾಪಂಗಳಲಿ ಕುರುಳ ಸೌಂದರ್ಯವನು
ನೋಡಿ ನಿನ್ನಂದವನು ಪರಿಭಾವಿಸಿ
ಒಂದೆಡೆಯೊಳಾವರುಂ ನಿನ್ನ ಸಾದೃಶ್ಯವನು
ಕಾಣವೆಯೆ ಕೊರಗುತಿಹೆನೆಲೆ ಚಂಡಿಯೆ.

೪೪

ಹೊಸಮಳೆಯ ನೀರಿನಲಿ ನಾಂದಿರುವ ನೆಲದಂತೆ
ಹೊಸದೊಂಮು ಕಂಪುಗುವ ನಿನ್ನ ಮೊಗಕೆ
ದೂರವಿರುವುದರಿಂದೆ ಕೃಶನಾಗಿ ನಮೆವೆನ್ನ
ಪಂಚಬಾಣನುಮಿರದೆ ಪೀಡಿಸುವನು.
ವರ್ಷಋತುವಿನೊಳಿಂತು ದೆಸೆದೆಸೆಯನಾವರಿಸಿ
ಸಾಂದ್ರಮೆನೆ ಕವಿದಿರುವ ಮೋಡದಿಂದೆ
ಅವ್ಯಕ್ತನಾಗಿರುವ ಸೂರ್ಯನಾತಪವಿರುವ
ದಿವಸಗಳನಿನ್ನೆಂತು ಕಳೆವುದಬಲೆ.

೪೫

ಧಾತುರಾಗಗಳಿಂವೆ ಗಿರಿಯ ಶಿಲೆಗಳ ಮೇಲೆ
ಪ್ರಣಯಕುಪಿತಳಪ್ಪೋಲು ನಿನ್ನ ಬರೆದು
ನಿನ್ನ ಚರಣಾಗ್ರದಲಿ ಕೆಡೆದವನಪ್ಪೋತೆನ್ನ
ಬಗೆಯಲೆಂದಾಶಿಸಿದ ಆ ಕ್ಷಣದೊಳೆ
ಸಲಸಲಕೆ ಉರುಳಿ ಬರುವಶ್ರುಬಿಂದುಗಳಿಂದ
ಕಣ್ಣು ಪನಿಗೊಡುವುದು ನೋಟ ಮಸುಳೆ.
ಘಾತುಕ ಕೃತಾಂತನಾ ಚಿತ್ರದೊಳಗಾದರುಂ
ನಮ್ಮೊಂದು ಸಂಗವನು ಸಹಿಸನಸ್ತಿ !

೪೬

ಸ್ವಪ್ನಸಂದರ್ಶನದೊಳತಿಕಷ್ಟದಿಂದಾನು
ನಿನ್ನ ಸಹವಾಸವನು ಹೊಂದಿದಂದು
ನಿನ್ನ ಬಿಗಿವಪ್ಪುವೆಂದಾಸೆಯಿಂದಾಗಸಕೆ
ಉದ್ವೇಗವಶನಾಗಿ ತೋಳನೆಸೆಯೆ
ಮತ್ತೆ ಮತ್ತೆನ್ನನಿಂತೀ ಸ್ಥಿತಿಯೊಳೀಕ್ಷಿಸುತೆ
ಬಳಿಯ ವನದೇವತೆಗಳೆನಗೆ ಮರುಗಿ
ಮರವ ಚಿಗುರೆಲೆ ಮೇಲೆ ತೋರಮುತ್ತಿನ ತೆರನ
ಕಣ್ಣೀರ ಹನಿಗಳನು ಸುರಿಸದಿಹರೆ !

೪೭

ದೇವದಾರುದ್ರುಮದ ಕಿಸಲಯದ ಕೊನೆಮುರಿದು
ಸುರಿವದರ ಹಾಲಿನೊಡವೆರೆದು ಬಂದು
ಅಮವೆ ಸೌರಭವೆರಸಿ ಆ ಹಿಮಾಚಲದಿಂದೆ
ದಕ್ಷಿಣಕೆ ಬೀಸುತಿರೆ ತಂಗಾಳಿಯು
ಕಲ್ಯಾಣಗುಣವತಿಯೆ ಮೊದಲು ನಿನ್ನಂಗವನು
ಸೋಂಕಿ ಬಳಿಕೀಯೆಡೆಗೆ ಬೀಸಿತೆಂದು
ಮನದೊಳಾಲೋಚಿಸುತಲಾನು ಮೈಯಾನುವೆನು
ಅಗಲಿಕೆಯ ಅಳಲಿನುರಿ ನೀಗಲೆಂದು.

೪೮

ದೀರ್ಘಯಾಮಗಳಿಂದಲುರುಳುತಿರುವೀ ರಾತ್ರಿ
ಕ್ಷಣದಂತೆ ಲಘುವೆನಿಸಿ ತೋರ್ಪುದೆಂತು !
ಅಂತೆ ಉರಿವೀ ಹಗಲುಮೆಲ್ಲ ವೇಳೆಯೊಳೆನಗೆ
ಮಂದಮಂದಾತಪದೊಳಿರ್ಪುದೆಂತು !
ಇಂತು ದುರ್ಲಭಮಾದ ಕಾಮನೆಗಳಿಂದೆನ್ನ
ತಪ್ತಚೇತನವಿಂದು ಚಟುಲನಯನೆ !
ನಿನ್ನನಗಲಿದ ವ್ಯಥೆಯ ದಾರುಣಾವಸ್ಥೆಯಲಿ
ಕೊರಗುತಿದೆ ಶರಣರಿನ್ನಿಲ್ಲವೆಂದು.

೪೯

ಬಹುವಿಧದೆ ಚಿಂತಿಸುತೆ ನಾನೆ ನನ್ನಾತ್ಮವನು
ಸಂತವಿಸಿ ಜೀವವನು ಧರಿಸಿರುವೆನು.
ನನ್ನ ಕುಶಲವ ಕೇಳಿ ಇನ್ನಾದರೂ ನೀನು
ಕಾತರಂಗೊಳ್ಳದಿರು ಕಲ್ಯಾಣಿಯೆ !
ಅತ್ಯಂತ ಸುಖವಿರುವುದಾರಿಗೀ ಲೋಕದಲಿ
ಅತ್ಯಂತ ದುಃಖವಿನ್ನಾರಿಗಿಹುದು.
ಒಂದಾದ ಮೇಲೊಂದು ಸುಖದುಃಖಗಳು ಬಂದು
ಚಕ್ರನೇಮಿಕ್ರಮದೆ ಪೊರಳುತಿಹವು.

೫೦

ಶಾಪ ಕೊನೆಗೊಳ್ಳುವುದು ಶಾರ್ಙ್ಗಪಾಣಿಯು ತಾನು
ಭುಜಗಶಯನವನುಳಿದು ಏಳುವಂದು.
ಉಳಿದ ನಾಲ್ತಿಂಗಳನು ಕಣ್ಮುಚ್ಚಿ ಕಳೆಯಬಲೆ
ಬಳಿಕ ನಾವೀರ್ವರೂ ಒಂದುಗೂಡಿ
ಶಾರದಾಕಾಶದಿಂದಿಳಿವ ಬೆಳ್ದಿಂಗಳಲಿ
ರಮಣೀಯಮೆನಿಸಲೆಸೆವ ರಾತ್ರಿಗಳಲಿ
ವಿರಹದೊಳು ಗುಣಿಸಿರುವ ನಂನಂಮ ಕಾಮಗಳ
ಮನವಾರೆ ಸವಿಯುವಂ ಮೋದದಿಂದೆ.

೫೧

ಹಿಂದೊಮ್ಮೆ ಹಾಸಿನಲಿ ನನ್ನೊಡನೆ ನೀಂ ಮಲಗಿ
ನಿದ್ರಿಸಿದ ವೇಳೆಯಲಿ ಕೊರಳನಪ್ಪಿ
ನಿದ್ರೆಯೊಳೆ ನೀನೇಕೊ ಕೂಗಿ ರೋದಿಸುತಿರಲು
ಏನು ಕಾರಣವೆಂದು ನಿನ್ನನಂದು
ಬಹುವಿಧದೆ ಬೆಸಗೊಳ್ಳೆ ನನ್ನೊಡನೆ "ಹೇ ಕಿತವ
ನೀನು ಮತ್ತಾವಳನೊ ರಮಿಸಿದಂತೆ
ಕನಸಾದುದೆನಗೆಂದು" ಮೊಗದ ಮಂದಸ್ಮಿತಮೊ-
ಳೆಂದುದನು ಮತ್ತೆಂದು ನೆನೆದನವನು.

೫೨

ಇಂತಭಿಜ್ಞಾನವನು ತಿಳುಹಿಸಿದ ಕಾರಣದೆ
ನನ್ನ ಕುಶಲವನರಿತು ಅಸಿತನಯನೆ!
ಲೋಕವಾರ್ತೆಯ ನಂಬಿ ನನ್ನೊಳನಿಮಿತ್ತದಿಂ
ನೀನವಿಶ್ವಾಸಿನಿಯೆನಿಸಬೇಡ!
ಸ್ನೇಹಧರ್ಮಗಳೆಂತೊ ವಿರಹಕಾಲದೊಳಿರದೆ
ನಶಿಸಿಹೋಗುವುವೆಂದು ಹೇಳುತಿಹರು.
ಭೋಗದ ಅಭಾವದಿಂದಿಷ್ಟವಿಷಯಂಗಳಲಿ
ರಸವುಕ್ಕಿ ಬೆಳೆವುದಾ ಪ್ರೇಮರಾಶಿ.

೫೩

ಪ್ರಥಮವಿರಹದೊಳಧಿಕಶೋಕವಿಹ್ವಲಳಾದ
ನಿನ್ನ ಸಖಿಯನು ಇಂತು ಸಂತವಿಸುತೆ
ವಿಷಮನೇತ್ರನ ವೃಷಭನಗೆದ ಶಿಖರಗಳಿರುವ
ಕೈಲಾಸದಿಂದೊಡನೆ ಹಿಂದಿರುಗುತೆ
ಆಕೆ ಕುರುಹುಗಳೊಡನೆ ಹೇಳಿಕಳುಹಿಸಿದಂಥ
ತನ್ನ ಕುಶಲದ ನುಡಿಯ ನನ್ನೊಳುಸುರಿ
ಉದಯಕಾಲದ ಕುಂದದರಳಂತೆ ಜಗುಳುತಿರು-
ವೆನ್ನ ಜೀವಿತವಿದನು ಬಂದುಳುಹಿಸು.

೫೪

ನಿನಗೆ ನಖನಹ ನನ್ನ ಈಯೊಂದಪೇಕ್ಷೆಯನು
 ಕೈಕೊಂಡು ಸಲಿಪೆಯೆಂದಾಶಿಸುವೆನು.
ನಿನ್ನ ಪ್ರತ್ಯಾದೇಶಪ್ರೊಂದರಿಂದಲೆ ನಾನು
 ಕಲ್ಪಿಸೆನು ಧೀರತೆಯ ನಿನ್ನೊಳೆಂದುಂ.
ನಿಶ್ಶಬ್ದನಾಗಿ ನೀಂ ಮಾರುತ್ತರಂಗುಡದೆ
 ಯಾಚಿಸುವ ಚಾತಕಕೆ ನೀರನೆರೆವೆ
ಸತ್ಪುರುಷರಾದರಿಗೆ ಈಪ್ಸಿತಾರ್ಥಕ್ರಿಯೆಯೆ
 ಪ್ರತ್ಯುತ್ತರಂ ಅಲ್ತೆ ಪ್ರಣಯಿಗಳಲಿ.

೫೫

ಗೆಳೆಯನಿವನೆಂದೆನುವ ಸೌಹಾರ್ದಭಾವದಿಂ-
 ದಲ್ಲದಿರೆ ವಿಧುರನೆಂದೆನುವ ಕತವೆ
ಕನಿಕರದೊಳೆಸಗು ನೀನೆನ್ನ ಪ್ರಿಯಕಾರ್ಯವನು
 ಅನುಚಿತವಿದೆಂಬುವನು ಪರಿಗಣಿಸದೆ.
ಇಷ್ಟಮಾದೆಡೆಗಳಲಿ ಬಳಿಕ ನೀಂ ಸಂಚರಿಸು
 ವರ್ಷಋತು ಸಂಭೃತಶ್ರೀಕನಾಗಿ.
ಕ್ಷಣಕಾಲಮಾನದರುಂ ವಿದ್ಯುತ್ಕಳತ್ರದಿಂ
 ನಿನಗಿಂಥ ವಿರಹ ಸಂಘಟಿಸದಿರಲಿ.

# ಕೆಲವು ಹೊಸ ಪ್ರಕಟನೆಗಳು

| | | | |
|---|---|---|---|
| **ಪ್ರೊ. ಕೃಷ್ಣಶಾಸ್ತ್ರೀ, ಎ. ಆರ್.** | | | |
| ವಚನ ಭಾರತ (ಎರಡನೆಯ ಮುದ್ರಣ) | ೬ | ೮ | ೦ |
| ಕಥಾಮೃತ | ೭ | ೮ | ೦ |
| ಭಾಸಕವಿ | ೨ | ೮ | ೦ |
| ಕವಿ ಜಿಹ್ವಾಬಂಧ | ೦ | ೧೨ | ೦ |
| **ಪ್ರೊ. ಶ್ರೀಕಂಠಯ್ಯ, ಟೀ. ನಂ.** | | | |
| ಒಲುಮೆ | ೧ | ೮ | ೦ |
| **ಶ್ರೀ ನರಸಿಂಹಾಚಾರ್, ಪು. ತಿ.** | | | |
| ರಸ ಸರಸ್ವತಿ | ೧ | ೮ | ೦ |
| **ಡಾ॥ ಕೃಷ್ಣಮೂರ್ತಿ, ಕೆ.** | | | |
| ಕನ್ನಡ ಧ್ವನ್ಯಾಲೋಕ | ೫ | ೦ | ೦ |
| ಕನ್ನಡ ಕಾವ್ಯಾಲಂಕಾರ (ಅಚ್ಚಿನಲ್ಲಿ) | | | |
| ಪ್ರತಿಮಾ ನಾಟಕ ( ,, ) | | | |
| **ಶ್ರೀ ಪರಮೇಶ್ವರಭಟ್ಟ, ಎಸ್. ವಿ.** | | | |
| ಕನ್ನಡ ಕುಮಾರಸಂಭವ | ೨ | ೮ | ೦ |
| ಪ್ರೇಮಾರಾಧನ | ೨ | ೦ | ೦ |
| ಕನ್ನಡ ಮೇಘದೂತ | ೧ | ೦ | ೦ |
| **ಶ್ರೀ ಕೃಷ್ಣಮೂರ್ತಿ, ಎ.** | | | |
| ಪಾಂಪೆಯ ಕೊನೆಯ ದಿನಗಳು | ೧ | ೮ | ೦ |
| **ಶ್ರೀ ಸುಬ್ಬರಾವ್, ತ. ರಾ.** | | | |
| ರಕ್ತರಾತ್ರಿ | ೨ | ೦ | ೦ |

ವಿವರಗಳಿಗೆ ಬರೆಯಿರಿ :—

## ಶಾರದಾ ಮಂದಿರ

**೫೭೮ ಕೃಷ್ಣರಾಜವನಂ, ಮೈಸೂರು**